ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ವಾರ್ತಾ ಪತ್ರ

# ಮನುವಿಕಾಸ
## ವಾರ್ತಾಪತ್ರ

MANUVIKASA

ಸಂಪಾದಕರು : ಶ್ರೀ ಗಣಪತಿ ಭಟ್ಟ

EdelGive Foundation
An Edelweiss Initiative

ಸಂಪುಟ - 4 ಸಂಚಿಕೆ - 1
ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಸಂಪಾದಕೀಯ ಮಂಡಳಿ : ಶ್ರೀಮತಿ ಶುಭಾ ಪೈ | ಶ್ರೀ ಗಣಪತಿ ಹೆಗಡೆ | ಶ್ರೀ ಪವನ ಬೊಮ್ಮನಹಳ್ಳಿ | ಕುಮಾರಿ ಶಿಲ್ಪಾ ಶಾಸ್ತ್ರಿ

## 2020-21ನೇ ಸಾಲಿನಲ್ಲಿ ಮನುವಿಕಾಸದಿಂದ 67 ಅವಸಾನದ ಅಂಚಿನಲ್ಲಿರುವ ದೊಡ್ಡ ಕೆರೆಗಳ ಪುನಶ್ಚೇತನ

ಮನುವಿಕಾಸ ಸಂಸ್ಥೆಯು ಹೆಚ್‌ಡಿಬಿ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್, ಅಜೀಂ ಪ್ರೇಮ್‌ಜಿ ಫೌಂಡೇಶನ್, ಯಸ್ ಫೌಂಡೇಶನ್ ಮತ್ತು ಸಿಎಮ್‌ಎಸ್ ಸಂಸ್ಥೆಗಳ ಆರ್ಥಿಕ ನೆರವಿನೊಂದಿಗೆ 2020–21ನೇ ಸಾಲಿನಲ್ಲಿ ಉತ್ತರಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಒಟ್ಟೂ 67ಕ್ಕೂ ಹೆಚ್ಚು ಕೆರೆಗಳನ್ನು ಪುನಶ್ಚೇತನಗೊಳಿಸಿದೆ.

ನಿರಂತರ ಗ್ರಾಮಸಭೆಯಲ್ಲಿ ಭಾಗವಹಿಸುವಿಕೆ. ರೈತ ಸಮುದಾಯಕ್ಕೆ ನೆಲ ಜಲ ಜಾಗೃತಿ ಮೂಲಕ ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಯ ಮಹತ್ವವನ್ನು ಮನದಟ್ಟು ಮಾಡಿಕೊಟ್ಟು ರೈತ ಸಮುದಾಯದಲ್ಲಿ ಆರ್ಥಿಕ ಸ್ವಾವಲಂಬನೆಯನ್ನು ಮತ್ತು ಭಾಗವಹಿಸುವಿಕೆಯ ಮನೋಭಾವನೆಯನ್ನು ಇಮ್ಮಡಿಗೊಳಿಸಿ ಸಂಸ್ಥೆಯು ಸಮುದಾಯದ ಏಳಿಗೆಗೆ ಶ್ರಮಿಸಿದೆ.

ಸಮುದಾಯದ ಸಹಭಾಗಿತ್ವದ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿ, ಜನಸಮುದಾಯದಲ್ಲಿ ಆರ್ಥಿಕ ಸ್ವಾವಲಂಬಿ ಮನೋಭಾವನೆಯನ್ನು ವೃದ್ಧಿಸುವ ದೃಷ್ಟಿಯಿಂದ ಮನುವಿಕಾಸ ಕೆರೆಗಳ ಪುನಶ್ಚೇತನ ಕಾರ್ಯಕ್ಕೆ ಮುಂದಾಗಿದೆ. ಗ್ರಾಮಗಳಲ್ಲಿ ಅಂತರ್ಜಲ ಮಟ್ಟದ ವೃದ್ಧಿ, ನೀರಿನ ಮೂಲಗಳ ರಕ್ಷಣೆ ಮತ್ತು ಸುವ್ಯವಸ್ಥಿತ ನಿರ್ವಹಣೆ, ರೈತರ ಜಮೀನುಗಳಲ್ಲಿ ಆದಾಯದ ಜೊತೆ ಮಿಶ್ರ ಬೇಸಾಯದ ಪರಿಕಲ್ಪನೆ. ಇವೆಲ್ಲವೂ ಕೂಡ ಈಗ ರೈತ ವರ್ಗಕ್ಕೆ ನೆಮ್ಮದಿಯ ಬದುಕನ್ನು ಕಟ್ಟಿಕೊಟ್ಟಿವೆ.




ಪುಟ 9ಕ್ಕೆ ಮುಂದುವರಿದಿದೆ

## ಮನುವಿಕಾಸದಿಂದ ಮಹಿಳಾ ಸಬಲೀಕರಣ ಮತ್ತು ಸ್ವ ಸಹಾಯ ಸಂಘಗಳ ರಚನೆ

ಮುಂದಿನ ಪೀಳಿಗೆಯನ್ನು ಸಶಕ್ತಗೊಳಿಸಲು ಮಹಿಳೆಯರನ್ನು ಸಶಕ್ತಗೊಳಿಸಿ ಎನ್ನುವ ಮಾತಿದೆ. ಆದರೆ ಸಾಮಾನ್ಯವಾಗಿ ಮಹಿಳೆಯರು ಮನೆಯ ಕೆಲಸಗಳಿಗಷ್ಟೇ ಸೀಮಿತವಾಗಿದ್ದು ಆರ್ಥಿಕ ಮತ್ತು ಸಾಮಾಜಿಕವಾಗಿ ಪುರುಷರನ್ನು ಅವಲಂಬಿಸಿರುವುದು ಸಾಮಾನ್ಯ ಸಂಗತಿಯಾಗಿದ್ದು, ಈ ಕಾರಣಗಳಿಗಾಗಿ ಅವರು ಸಾಕಷ್ಟು ಬಾರಿ ಸಾಮಾಜಿಕ ಶೋಷಣೆಗೆ ಒಳಗಾಗಿರುವುದು ಬಹಳ ಕಳವಳಕಾರಿ ಸಂಗತಿಯಾಗಿದೆ.



ಭೂರಹಿತ ಕುಟುಂಬಗಳ ಮಹಿಳೆಯರು, ಸಣ್ಣ ಕೃಷಿ ಕುಟುಂಬಗಳು, ಚಿಂದಿ ಆಯುವವರು ಮತ್ತು ಮೀನುಗಾರರನ್ನು ಅಸಂಘಟಿತ ವಲಯದ ಅಡಿಯಲ್ಲಿ ಗುರುತಿಸಲಾಗಿದೆ. ಸಮಾಜದ ಹಿಂದುಳಿದ ವರ್ಗಗಳು ಆಹಾರ ಮತ್ತು ಪೌಷ್ಟಿಕಾಂಶ, ಶಿಕ್ಷಣ, ಮೂಲಭೂತ ಸೌಕರ್ಯಗಳು, ಸಾಲ ಸೌಲಭ್ಯಗಳು ಮತ್ತು ತಂತ್ರಜ್ಞಾನದ ಕೊರತೆಯನ್ನು ಎದುರಿಸುತ್ತಿವೆ. ಹಳ್ಳಿಗಳಲ್ಲಿರುವ ಹೆಚ್ಚಿನ ಹಿಂದುಳಿದ ವರ್ಗಗಳು ಔಪಚಾರಿಕ ಬ್ಯಾಂಕ್ ವ್ಯವಸ್ಥೆಯ ಬಗ್ಗೆ ಅರಿವನ್ನು ಹೊಂದಿಲ್ಲ. ಬದಲಾಗಿ ಸ್ಥಳೀಯ ಲೇವಾದೇವಿ ವ್ಯವಹಾರದವರ ಹಿಡಿತದಲ್ಲಿದ್ದಾರೆ ಹಾಗೂ ಅವರಿಂದ ಪಡೆದ ಹಣಕ್ಕೆ ಹೆಚ್ಚಿನ ಬಡ್ಡಿಯನ್ನು ಕಟ್ಟುತ್ತಿದ್ದಾರೆ. ರಾಷ್ಟ್ರೀಕೃತ ಮತ್ತು ಕೆಲ ಖಾಸಗಿ ಬ್ಯಾಂಕ್‌ಗಳು ಇವರ ಅವಶ್ಯಕತೆಗಳನ್ನು ತಲುಪಿಲ್ಲ. ಕೆಲ ಹಣಕಾಸು ಸಂಸ್ಥೆಗಳು ನಗರ ಮತ್ತು ಪಟ್ಟಣಗಳಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತಿವೆ ಹಾಗೂ ದೂರದ ಹಳ್ಳಿಗಳನ್ನು ಇವು ತಲುಪುತ್ತಿಲ್ಲ.

ಪುಟ 11ಕ್ಕೆ ಮುಂದುವರಿದಿದೆ

# ಸಂಪಾದಕೀಯ



ಆತ್ಮೀಯ ಓದುಗರೆ...

ಮನುವಿಕಾಸದ ಈ ಸಂಚಿಕೆಯನ್ನು ತಮ್ಮ ಮುಂದಿಡಲು ನನಗೆ ಅತೀವ ಸಂತಸವೆನಿಸುತ್ತಿದೆ. ಕಳೆದ ಮೇ ತಿಂಗಳಿನಲ್ಲಿ ಮತ್ತೆ ಬಂದೊದಗಿದ ಕೋವಿಡ್ ಸೋಂಕಿನಿಂದ ಸಂಸ್ಥೆಯ ಕಾರ್ಯಚಟುವಟಿಕೆಗಳು ಸ್ವಲ್ಪ ಮಟ್ಟಿಗೆ ಕುಂಠಿತವಾದದ್ದಂತೂ ನಿಜ. ಆದರೆ ಸಮಾಜಮುಖಿ ಕೆಲಸದಲ್ಲಿ ಸದಾ ಮುಂದಿರುವ ನಮ್ಮ ಸಂಸ್ಥೆ ಈ ಕಠಿಣ ಸಂದರ್ಭದಲ್ಲೂ ಸಮಾಜದ ಮುಖ್ಯ ವಾಹಿನಿಯಲ್ಲಿ ಹಲವಾರು ದುರ್ಬಲ ವರ್ಗಕ್ಕೆ ತಲುಪಿ ತನ್ನ ಕೈಲಾದ ಸಹಾಯ ಹಸ್ತ ಚಾಚಿದೆ.

ದೇಶವ್ಯಾಪಿ ಲಾಕ್‌ಡೌನ್ ಸಮಯದಲ್ಲಿ ದಿನಗೂಲಿ ನೌಕರರು ಬಹಳ ಸಂಕಷ್ಟದಲ್ಲಿರುವುದನ್ನು ಮನಗಂಡ ಮನುವಿಕಾಸ 2000ಕ್ಕೂ ಹೆಚ್ಚು ಕೂಲಿ ಕಾರ್ಮಿಕರಿಗೆ, ನಿರ್ಗತಿಕರಿಗೆ, ಅಂಗವಿಕಲರಿಗೆ, ಅನಾಥರಿಗೆ, ದುರ್ಬಲರಿಗೆ ಅಗತ್ಯ ದಿನಸಿ ಕಿಟ್‌ಗಳನ್ನು ತಲುಪಿಸಿದೆ. ಇದಕ್ಕೆ ಅಜೀಂ ಪ್ರೇಮ್‌ಜಿ ಫೌಂಡೇಶನ್, ದಲ್ಯಾನ್ ಫೌಂಡೇಶನ್ ಮತ್ತು ಈಡಲ್‌ಗೀವ್ ಫೌಂಡೇಶನ್‌ಗಳು ಕಿಟ್ ವಿತರಣೆಗೆ ಬೇಕಾದ ಆರ್ಥಿಕ ನೆರವನ್ನು ನೀಡಿವೆ.

ಕೋವಿಡ್ ಸೋಂಕಿತರ ಆರೋಗ್ಯ ಪಾಲನೆ ಮತ್ತು ಆರೈಕೆಯನ್ನು ಗಮನಿಸಿದ ಬೆಂಗಳೂರಿನ ವಟ್ಟಿಕುಟಿ ಇಂಡಿಯಾ ಫೌಂಡೇಶನ್, ಮನುವಿಕಾಸದ ಜೊತೆಗೂಡಿ ಆಸ್ಪತ್ರೆಗಳಿಗೆ ಬೇಕಾದ ಮೂಲಭೂತ ಉಪಕರಣಗಳನ್ನು ಜಿಲ್ಲೆಯ ಶಿರಸಿ ಮತ್ತು ಸಿದ್ದಾಪುರ ಆಸ್ಪತ್ರೆಗಳಿಗೆ ನೀಡಿ ಮನ್ನಣೆ ಪಡೆದಿದೆ.

ಸಮಾಜದ ಮುಖ್ಯ ಸ್ಥರದಲ್ಲಿ ಕಾರ್ಯನಿರ್ವಹಿಸುವ ಖಾಸಗಿ ಶಾಲಾ ಶಿಕ್ಷಕರ ಪರಿಸ್ಥಿತಿಯನ್ನು ಮನಗಂಡು ಸಂಸ್ಥೆಯು ಶಿರಸಿ, ಸಿದ್ದಾಪುರ ತಾಲೂಕುಗಳ 100ಕ್ಕೂ ಹೆಚ್ಚು ಶಿಕ್ಷಕರಿಗೆ ಅಗತ್ಯ ದಿನಸಿ ಕಿಟ್‌ಗಳನ್ನು ಗೌರವದಿಂದ ವಿತರಿಸಿದೆ.

ಕೊರೋನಾ ಹಿಮ್ಮೆಟ್ಟಿಸಲು ವಾರಿಯರ್ಸ್‌ಗಳಂತೆ ಸದಾ ಮುಂದೆ ನಿಂತು ಹಗಲಿರುಳು ಕೆಲಸ ಮಾಡಿದ ಆಶಾ ಕಾರ್ಯಕರ್ತೆಯರ ಕೆಲಸವನ್ನು ಗೌರವಿಸುತ್ತಾ ಅವರಿಗೆ ತಮ್ಮ ರಕ್ಷಣೆಗೆ ಬೇಕಾದ ಮಾಸ್ಕ್, ಸ್ಯಾನಿಟೈಸರ್, ಫೇಸ್ ಶೀಲ್ಡ್‌ಗಳನ್ನುಕೂಡ ಮನುವಿಕಾಸ ವಿತರಿಸಿದೆ.

ಮನೆಗೆ ಬಾವಿ ಹೇಗೆ ಮುಖ್ಯವೋ ಊರಿಗೆ ಊರ ಮುಂದಿನ ಕೆರೆ ಎನ್ನುವ ಮಾತಿದೆ. ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆಯನ್ನು ರೈತ ಸಮುದಾಯಕ್ಕೆ ತಿಳಿಯ ಪಡಿಸಲು ಮನುವಿಕಾಸ ಸಂಸ್ಥೆಯು ಹೆಚ್‌ಡಿಬಿ ಫೈನಾನ್ಶಿಯಲ್ ಸರ್ವಿಸಸ್ ಲಿ., ಯಸ್ ಫೌಂಡೇಶನ್, ಅಜೀಂ ಪ್ರೇಮ್‌ಜಿ ಫೌಂಡೇಶನ್, ಸಿಎಮ್‌ಎಸ್ ಸಂಸ್ಥೆಗಳ ಜೊತೆಗೂಡಿ ಹಲವಾರು ಕೆರೆಗಳ ಪುನಶ್ಚೇತನ ಕಾರ್ಯಕ್ರಮವನ್ನು ಉತ್ತರಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಾದ್ಯಂತ ಹಮ್ಮಿಕೊಂಡು ಪ್ರಗತಿಯನ್ನು ಸಾಧಿಸಿದೆ. ಇವುಗಳ ಸಮಗ್ರ ವಿವರವನ್ನು ಈ ಸಂಚಿಕೆ ಒಳಗೊಂಡಿದೆ.

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಲಾಕ್‌ಡೌನ್ ಸಮಯದಲ್ಲಿ ಮನುವಿಕಾಸ ಸಂಸ್ಥೆಯ ನೆರವಿನಿಂದ ಕೆಲಸ ಮಾಡಿದ ಆಯ್ದ ದಿನಗೂಲಿ ಕಾರ್ಮಿಕರ ಉತ್ಸಾಹವನ್ನು ಹೆಚ್ಚಿಸಿ ಅವರಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಂಘವು ಆಯ್ದ ದಿನಗೂಲಿ ಕೆಲಸಗಾರರಿಗೆ ಗುದ್ದಲಿ, ಪಿಕಾಸಿ ಮತ್ತು ಬುಟ್ಟಿಗಳನ್ನು ವಿತರಿಸಿದೆ.

ಇವುಗಳ ಜೊತೆಗೆ ಮಹಿಳಾ ಸಬಲೀಕರಣ, ಸ್ವ ಸಹಾಯ ಸಂಘಗಳ ರಚನೆ ಮತ್ತು ಕಾರ್ಯಚಟುವಟಿಕೆಗಳು. ಕೌಶಲ್ಯ ತರಬೇತಿಗಳ ಆಯೋಜನೆ ಮೊದಲಾದ ಪೂರಕ ಅಂಶಗಳನ್ನು ಸಂಚಿಕೆ ಹೊತ್ತುತಂದಿದೆ.

ನಮ್ಮ ಈ ಎಲ್ಲ ಚಟುವಟಿಕೆಗಳಿಗೆ ಬೆನ್ನೆಲುಬಾಗಿ ನಿಂತು ನಮಗೆ ಮಾರ್ಗದರ್ಶನ ಮಾಡಿದ ನಮ್ಮ ಸಂಸ್ಥೆಯ ನಿರ್ದೇಶಕ ಮಂಡಳಿಯ ಎಲ್ಲಾ ಸದಸ್ಯರಿಗೂ ಹಾಗೂ ಅವಿರತ ಶ್ರಮವಹಿಸಿ ಲಾಕ್‌ಡೌನ್ ನಂತಹ ಕಠಿಣ ಸಮಯದಲ್ಲೂ ನಿರಂತರವಾಗಿ ಮನುವಿಕಾಸಕ್ಕೆ ಅಗತ್ಯ ದಿನಸಿ ಕಿಟ್‌ಗಳನ್ನು ವಿತರಿಸಲು ಶ್ರಮಿಸಿದ ಹಾಗೂ ಎಲ್ಲಾ ಚಟುವಟಿಕೆಗಳಲ್ಲಿ ಭಾಗಿಯಾದ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಿಗೆ ಈ ಮೂಲಕ ಧನ್ಯವಾದಗಳನ್ನು ಹೇಳುತ್ತೇನೆ.

ಈ ಚಟುವಟಿಕೆಗಳಿಗೆ ಸಹಕಾರ ನೀಡಿದ ಉತ್ತರಕನ್ನಡ, ಶಿವಮೊಗ್ಗ, ಹಾವೇರಿ ಮತ್ತು ಧಾರವಾಡ ಜಿಲ್ಲೆಗಳ ಎಲ್ಲಾ ಸರಕಾರ ಸರಕಾರೇತರ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಈ ಮೂಲಕ ಧನ್ಯವಾದ ಹೇಳಲು ಬಯಸುತೇವೆ. ರೂಪಿಸಲಾದ ಚಟುವಟಿಕೆಗಳು ಜನಸಮುದಾಯವನ್ನು ತಲುಪಿ ಅವುಗಳಿಂದ ಸಮುದಾಯಗಳ ಅಭಿವೃದ್ದಿಯಾದಾಗ ಮಾತ್ರ ಸಂಘ ಸಂಸ್ಥೆಗಳ ಉದ್ದೇಶ ಪೂರ್ಣವಾದಂತೆ ಎಂದು ನಂಬಿದ್ದೇವೆ. ಸಂಚಿಕೆಯನ್ನು ಓದಿ ಅಭಿಪ್ರಾಯಗಳನ್ನು ಹಂಚಿಕೊಂಡರೆ ಅದು ನಮಗೆ ಮುನ್ನಡೆಯಲು ದಾರಿದೀಪ.

ಧನ್ಯವಾದಗಳೊಂದಿಗೆ

**ಶ್ರೀ ಗಣಪತಿ ಭಟ್ಟ**
ನಿರ್ದೇಶಕರು, ಮನುವಿಕಾಸ

# ಮನುವಿಕಾಸ ಸಂಸ್ಥೆಯಿಂದ ಹೂಳೆತ್ತಿ ಅಭಿವೃದ್ಧಿಪಡಿಸಿದ ಎಲ್ಲ ಕೆರೆಗಳಿಗೆ ನೀರು ತುಂಬಿಸುತ್ತೇವೆ: ಸಚಿವ ಶ್ರೀ ಶಿವರಾಮ ಹೆಬ್ಬಾರ



ಸಚಿವರಾದ ಶ್ರೀ ಶಿವರಾಮ ಹೆಬ್ಬಾರ ಮತ್ತು ಮನುವಿಕಾಸ ಸಂಸ್ಥೆಯ ಶ್ರೀ ಗಣಪತಿ ಭಟ್ಟ ಅವರಿಂದ ಹಲಗದ್ದೆ ಪಂಚಾಯತ ವ್ಯಾಪ್ತಿಯ ಮರಗುಂಡಿ ಹಿರೆಕೆರೆ ಕಾಮಗಾರಿ ಉದ್ಘಾಟನೆ



ಕರ್ನಾಟಕ ಸರ್ಕಾರದ ಕಾರ್ಮಿಕ ಸಚಿವರು ಮತ್ತು ಉತ್ತರಕನ್ನಡ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶಿವರಾಮ ಹೆಬ್ಬಾರ ಬದನಗೋಡ ಪಂಚಾಯತ ವ್ಯಾಪ್ತಿಯ ಹೊಸಕೊಪ್ಪ ಹಿರೆಕೆರೆ ಕಾಮಗಾರಿ ವೀಕ್ಷಿಸಿ ಮಾತನಾಡುತ್ತಿರುವುದು

ಮನುವಿಕಾಸ ಸಂಸ್ಥೆ ಮುಂಡಗೋಡ ಮತ್ತು ಸಿರ್ಸಿ ತಾಲೂಕಿನ ಪೂರ್ವ ಭಾಗಗಳಲ್ಲಿ ಕೆರೆ ಹೂಳೆತ್ತಿ ಅಭಿವೃದ್ಧಿಪಡಿಸುವ ಮೂಲಕ ರೈತರ ಬಾಳಿನ ಸಂಜೀವಿನಿಯಾಗಿದೆ. ಸತತ ನಾಲ್ಕೈದು ವರ್ಷಗಳಿಂದ ಸಂಸ್ಥೆ ಎಡಬಿಡದೆ ನಿರಂತರ ಕೆರೆ ಅಭಿವೃದ್ಧಿಯಲ್ಲಿ ತೊಡಗಿಕೊಂಡಿದೆ. ವರದಾ ಮತ್ತು ಬೇಡ್ತಿ ನದಿಗಳಿಂದ ಈಗಾಗಲೇ ಸರ್ಕಾರ ಕೆರೆ ನೀರು ತುಂಬಿಸುವ ಯೋಜನೆ ಪ್ರಾರಂಭಿಸಿದ್ದು, ಮನುವಿಕಾಸ ಸಂಸ್ಥೆಯಿಂದ ಅಭಿವೃದ್ಧಿಪಡಿಸಿದ ಕೆರೆಗಳಿಗೆ ಪ್ರಥಮ ಪ್ರಾಶಸ್ತ್ಯದಲ್ಲಿ ನೀರು ತುಂಬಿಸಲಾಗುವುದು. ಸರ್ಕಾರದಿಂದ ಕೆರೆ ಹೂಳು ತೆಗೆಯಲು ಅನುದಾನ ಸಿಗುತ್ತಿಲ್ಲ. ಮನುವಿಕಾಸ ಸಂಸ್ಥೆ ವಿವಿಧ ಸಂಘ ಸಂಸ್ಥೆಗಳ ನೆರವಿನ ಮೂಲಕ ಕೆರೆ ಹೂಳು ತೆಗೆದು ಅಭಿವೃದ್ಧಿಪಡಿಸುತ್ತಿರುವುದು ಶ್ಲಾಘನೀಯ. ಸರ್ಕಾರದಿಂದ ಮನುವಿಕಾಸ ಸಂಸ್ಥೆಯ ಮುಂದಿನ ಎಲ್ಲ ಕೆಲಸಗಳಿಗೆ ಸಹಕಾರ ನೀಡಲಾಗುತ್ತದೆ. ಮುಂಡಗೋಡ, ಬನವಾಸಿ ಭಾಗದ ರೈತರು ಬಡವರಾಗಿದ್ದು ಅವರಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದು ಅತೀ ಅವಶ್ಯಕವಿದೆ. ಅನೇಕ ಕೆರೆಗಳು ಒತ್ತುವರಿಯಾಗಿದ್ದು ತಕ್ಷಣ ಸರ್ವೆ ಮಾಡಿಸಿ ಗಡಿ ನಿರ್ಧಾರ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಲಾಗುವುದು ಎಂದು ಕರ್ನಾಟಕ ಸರ್ಕಾರದ ಕಾರ್ಮಿಕ ಸಚಿವರೂ ಮತ್ತು ಉತ್ತರಕನ್ನಡ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶ್ರೀ ಶಿವರಾಮ ಹೆಬ್ಬಾರ ತಿಳಿಸಿದರು.

ಇವರು ದಿನಾಂಕ 26.03.2021 ರಂದು ಮನುವಿಕಾಸ ಸಂಸ್ಥೆಯಿಂದ ಹೂಳೆತ್ತಿ ಅಭಿವೃದ್ಧಿಪಡಿಸಿದ ಬದನಗೋಡ ಪಂಚಾಯತ ವ್ಯಾಪ್ತಿಯ ಹೊಸಕೊಪ್ಪ, ಅಂಡಗಿ ಪಂಚಾಯತ ವ್ಯಾಪ್ತಿಯ ಕಾನಕಟ್ಟೆಕೆರೆ ವೀಕ್ಷಿಸಿ ನಂತರ ಹಲಗದ್ದೆ ಪಂಚಾಯತ ವ್ಯಾಪ್ತಿಯ ಮರಗುಂಡಿ ಹಿರೆಕೆರೆ ಕಾಮಗಾರಿ ಉದ್ಘಾಟಿಸಿ ಮಾತನಾಡಿದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕ ಶ್ರೀ. ಗಣಪತಿ ಭಟ್ಟ ಮಾತನಾಡಿ ಸಂಸ್ಥೆಯಿಂದ 120 ದೊಡ್ಡ ಕೆರೆಗಳನ್ನು ಅಬಿವೃದ್ಧಿ ಪಡಿಸಲಾಗಿದ್ದು 1000 ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸಂಸ್ಥೆ ಗುರಿ ಹೊಂದಿದೆ. ಸಂಸ್ಥೆ ಕೆರೆ ಅಭಿವೃದ್ಧಿಪಡಿಸಲು ಪ್ರಾರಂಭಿಸಿದ ದಿನದಿಂದ ಸರ್ಕಾರದ ಮಟ್ಟದಲ್ಲಿ ಸಿಗಬೇಕಾದ ಎಲ್ಲ ನಿರಕ್ಷೇಪಣಾ ಪತ್ರ ಪಡೆಯುವಲ್ಲಿ ಸಚಿವ ಶ್ರೀ ಶಿವರಾಮ ಹೆಬ್ಬಾರ ಸಹಕಾರ ಅವಿಸ್ಮರಣೀಯವಾಗಿದೆ. ಯಾವುದೇ ಅಭಿವೃದ್ಧಿ ಕೆಲಸ ಯಶಸ್ಸು ಕಾಣಲು ಸರಕಾರ, ಸಂಘ ಸಂಸ್ಥೆ ಮತ್ತು ಸ್ಥಳೀಯ ಜನತೆ ಒಗ್ಗೂಡಿ ಕೆಲಸ ನಿರ್ವಹಿಸಿದಾಗ ಸಾಧ್ಯವಾಗುತ್ತದೆ. ಸರ್ಕಾರ ಎಲ್ಲ ಕೆರೆಗಳನ್ನು ಸರ್ವೆ ಮಾಡಿಸಿ ಗಡಿ ನಿರ್ಧಾರ ಮಾಡಿದಲ್ಲಿ ಅಭಿವೃದ್ದಿಗೆ ಅನುಕೂಲವಾಗುತ್ತದೆ. ಮನುವಿಕಾಸ ಸಂಸ್ಥೆ ಕೆರೆ ಅಭಿವೃದ್ಧಿಯೊಂದಿಗೆ ಸಮಗ್ರ ಮಣ್ಣು ಮತ್ತು ನೀರು ಬಳಕೆ ಕುರಿತು ಮುಂದಿನ ದಿನದಲ್ಲಿ ರೈತರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡಲಿದೆ ಎಂದರು. ಬದನಗೋಡ ಗ್ರಾಮ ಪಂಚಾಯತ ಅಧ್ಯಕ್ಷೆ ಶ್ರೀಮತಿ ಗೀತಾ ಆಲೂರ, ಜಿಲ್ಲಾ ಪಂಚಾಯತಿ ಸದಸ್ಯೆ ರೂಪಾ ನಾಯ್ಕ, ಮುಖಂಡರಾದ ದ್ಯಾಮಣ್ಣಾ ದೊಡ್ಮನಿ, ಎ.ಪಿ.ಎಂ.ಸಿ ಸದಸ್ಯ ಪ್ರಶಾಂತ ಗೌಡರ್, ಮನುವಿಕಾಸ ಸಂಸ್ಥೆಯ ಮಂಜುನಾಥ ಹೆಗಡೆ, ಅಶ್ವಥ ನಾಯ್ಕ, ಗಣಪತಿ ಗಾಮದ್, ಶ್ರೀಕಾಂತ ಮತ್ತು ಮಣಿಕಂಠ ಮತ್ತಿತರರು ಉಪಸ್ಥಿತರಿದ್ದರು.



ಸಚಿವರಾದ ಶ್ರೀ ಶಿವರಾಮ ಹೆಬ್ಬಾರ ಅವರಿಂದ ಬದನಗೋಡ ಪಂಚಾಯತ ವ್ಯಾಪ್ತಿಯ ಹೊಸಕೊಪ್ಪ ಹಿರೆಕೆರೆ ಕಾಮಗಾರಿ ವೀಕ್ಷಣೆ

# ಮನುವಿಕಾಸದಿಂದ ಮಾನವೀಯತೆ: ವಿಶ್ವೇಶ್ವರ ಹೆಗಡೆ ಕಾಗೇರಿ




ವಿಧಾನಸಭೆ ಅಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ. ಗಣಪತಿ ಭಟ್ ಅವರಿಂದ ಆಶಾ ಕಾರ್ಯಕರ್ತೆಯರಿಗೆ ಅಗತ್ಯ ದಿನಸಿ ಕಿಟ್ ವಿತರಣೆ

ಮನುವಿಕಾಸ ಸ್ವಯಂ ಸೇವಾಸಂಸ್ಥೆಯು ಅಜೀಂಪ್ರೇಮ್‌ಜಿ ಫೌಂಡೇಶನ್‌ನ ಸಹಯೋಗದೊಂದಿಗೆ ಕೋವಿಡ್–19 ತುರ್ತು ಸಂದರ್ಭದಲ್ಲಿ ಬಡವರಿಗೆ, ನಿರ್ಗತಿಕತಿಗೆ, ಅಂಗವಿಕಲರಿಗೆ, ಅಗತ್ಯ ವಸ್ತುಗಳ ಕಿಟ್ ವಿತರಣಾ ಕಾರ್ಯಕ್ರಮವನ್ನು ಕಾನಸೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಮೈದಾನದಲ್ಲಿ 2/6/2021ರಂದು ಹಮ್ಮಿಕೊಂಡಿತ್ತು. ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರು, ಅಂಗವಿಕಲರು, ಹಾಗೂ ಬಡ ಕುಟುಂಬದ ಒಟ್ಟೂ 100 ಸದಸ್ಯರಿಗೆ ಸಾಂಕೇತಿಕವಾಗಿ ಅಂದಾಜು ಒಂದು ಲಕ್ಷದ ಇಪ್ಪತ್ತು ಸಾವಿರ ಮೌಲ್ಯದ ಕಿರಾಣಿ ಸಾಮಗ್ರಿಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಭಾಗಿಯಾಗಿ ಕಿಟ್ ವಿತರಿಸಿ ಮಾತನಾಡಿದ ಸನ್ಮಾನ್ಯ ವಿಧಾನಸಭೆ ಅಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ನಮ್ಮ ಜಿಲ್ಲೆಯಲ್ಲಿ ಕೋವಿಡ್ ಸೋಂಕು ತೀವ್ರವಾಗಿ ಹೆಚ್ಚುತ್ತಿದ್ದು, ಸ್ವಯಂ ಜಾಗೃತಿಯಿಂದ ಮಾತ್ರ ರೋಗ ತಡೆಗಟ್ಟಲು ಸಾಧ್ಯ ಎಂದರು. ಮನುವಿಕಾಸ ಸಂಸ್ಥೆ ಈ ಸಂದರ್ಭದಲ್ಲಿ ಅಗತ್ಯ ಕಿಟ್‌ಗಳನ್ನು ವಿತರಿಸಿ ಮಾನವೀಯತೆ ಮೆರೆಯುತ್ತಿದೆ, ಸರಕಾರದ ಜೊತೆ ಜೊತೆಗೆ ಸಂಘ ಸಂಸ್ಥೆಗಳು ಸಮಾಜಮುಖಿ ಕೆಲಸದಲ್ಲಿ ತೊಡಗಿದಾಗ ಮಾತ್ರ ಸಮಾಜದ ಏಳಿಗೆ ಸಾಧ್ಯ ಮನುವಿಕಾಸ ಸಂಸ್ಥೆಯಈ ಪ್ರಯತ್ನ ಮತ್ತು ಪರಿಶ್ರಮ ಶ್ಲಾಘನೀಯ ಎಂದರು. ಇದೇ ಸಂದರ್ಭದಲ್ಲಿ ಆಯ್ದ ಫಲಾನುಭವಿಗಳಿಗೆ ಅಗತ್ಯ ಕಿಟ್‌ಗಳನ್ನು ವಿತರಿಸಲಾಯಿತು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ, ಕರ್ಜಗಿ ಅಧಿಕಾರಿಗಳನ್ನು ಪರಿಚಯಿಸಿ ಸ್ವಾಗತಿಸಿ, "ಮನುವಿಕಾಸ ಸಂಸ್ಥೆಯು ಸಾಮಾಜಿಕ ಜವಾಬ್ದಾರಿಯನ್ನು ಅರಿತು ಕೆಲಸ ನಿರ್ವಹಿಸುತ್ತಿದ್ದು ಕೊರೊನಾ–19ರ ತುರ್ತು ಸಂದರ್ಭದಲ್ಲಿ ತಳಮಟ್ಟದ ಜನಸಮುದಾಯಕ್ಕೆ ಅಗತ್ಯವಿರುವ ದಿನಸಿ ಕಿಟ್ ಗಳನ್ನು ವಿತರಿಸುತ್ತಿದೆ, ಮುಂಬರುವ ದಿನಗಳಲ್ಲಿ ಈ ಯೋಜನೆ ಇನ್ನೂ ಹಲವು ಸ್ಥರದ ಸಮುದಾಯವನ್ನು ತಲುಪಲಿದೆ "ಎಂದರು.

ಕಾರ್ಯಕ್ರಮದಲ್ಲಿ ಸಿದ್ದಾಪುರ ತಾಲೂಕಿನ ವೈದ್ಯಾಧಿಕಾರಿ ಡಾ. ಲಕ್ಷ್ಮೀಕಾಂತ, ತಹಶಿಲ್ದಾರರಾದ ಪ್ರಸಾದ್, ಪಿಎಸ್‌ಐ ಶ್ರೀ ಮಹಾಂತೇಶ, ತಾಲೂಕಾ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಪ್ರಸನ್ನರಾವ್, ಸ್ಥಳೀಯ ವೈದ್ಯರು ಗ್ರಾಮ ಪಂಚಾಯತ್ ಅಧ್ಯಕ್ಷರು, ಸದಸ್ಯರು ಸುಭಾಷ್ ನಾಯ್ಕ ಕಾನಸೂರ ಹಾಗೂ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಗಣಪತಿ ಹೆಗಡೆ, ಪವನ ಬೊಮ್ಮನಹಳ್ಳಿ, ಎಮ್. ಜಿ. ಹೆಗಡೆ, ಹಾಗೂ ಮುಂತಾದವರು ಉಪಸ್ಥಿತರಿದ್ದರು.



ವಿಧಾನಸಭೆ ಅಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಂದ ಫಲಾನುಭವಿಗಳಿಗೆ ಅಗತ್ಯ ದಿನಸಿ ಕಿಟ್ ವಿತರಣೆ

# ಅನಾಥಾಶ್ರಮಕ್ಕೆ ಆಶ್ರಯವಾದ ಮನುವಿಕಾಸ



ಮನುವಿಕಾಸ ಸಂಸ್ಥೆಯಿಂದ ಸಿದ್ದಾಪುರ ತಾಲೂಕಿನ ಮುಗದೂರು ಗ್ರಾಮದ ಪ್ರಚಲಿತ ಆಶ್ರಯಧಾಮ ಅನಾಥಾಶ್ರಮದಲ್ಲಿ 20 ಜನ ಕೊರೋನಾ ಸೋಂಕಿತರಿಗೆ ಅಗತ್ಯ ದಿನಸಿ ಕಿಟ್ ಹಂಚಿಕೆ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಅಜೀಂಪ್ರೇಮ್‌ಜಿ ಫೌಂಡೇಶನ್ ಸಹಯೋಗದೊಂದಿಗೆ ಕೋವಿಡ್–19 ತುರ್ತು ಸಂದರ್ಭದಲ್ಲಿ ಸಿದ್ದಾಪುರ ತಾಲೂಕಿನ ಆರೋಗ್ಯ ವೈದ್ಯಾಧಿಕಾರಿಗಳ ಕಛೇರಿ ಆವರಣದಲ್ಲಿ ದಿನಾಂಕ 05/06/2021 ರಂದು ಸಿದ್ದಾಪುರ ಪಟ್ಟಣ ಪಂಚಾಯಿತಿ, ಹಾರ್ಸಿಕಟಾ ಮತ್ತು ಕೋಲ್‌ಸಿರ್ಸಿ ಪಂಚಾಯತಿಗಳ ಆಯ್ದ ಆಶಾಕಾರ್ಯಕರ್ತೆಯರಿಗೆ ಅಗತ್ಯ ವಸ್ತುಗಳ ಕಿಟ್ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ತಾಲೂಕಾ ವೈದ್ಯಾಧಿಕಾರಿ ಡಾ. ಶ್ರೀ ಲಕ್ಷ್ಮೀಕಾಂತ್ ಮಾತನಾಡಿ, “ಇಂದು ಕೊರೋನ ಜಾಗೃತಿಗಾಗಿ ಹಗಲಿರುಳು ಶ್ರಮಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಸರಿಯಾಗಿ ಸಂಬಳದ ವ್ಯವಸ್ಥೆ ಆಗುತ್ತಿಲ್ಲ, ಈ ಸಂದರ್ಭದಲ್ಲಿ ಮನುವಿಕಾಸ ಸಂಸ್ಥೆ ಅಗತ್ಯ ಕಿಟ್‌ಗಳನ್ನು ಒದಗಿಸುತ್ತಿರುವುದು ನಿಜವಾಗಿಯೂ ಅಭಿನಂದನಾರ್ಹ” ಎಂದರು.

ಇದೇ ಸಂದರ್ಭದಲ್ಲಿ ಸಿದ್ದಾಪುರ ತಾಲೂಕಿನ ಮುಗದೂರು ಗ್ರಾಮದ ಪ್ರಚಲಿತ ಆಶ್ರಯಧಾಮ ಅನಾಥಾಶ್ರಮದಲ್ಲಿ 20 ಕೊರೋನಾ ಸೋಂಕಿತರಿಗೆ ಅಗತ್ಯ ಸಾಮಗ್ರಿಗಳ ಕಿಟ್ ವಿತರಿಸಲಾಯಿತು..




ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಕರ್ಜಗಿ, ಅನಾಥಾಶ್ರಮದ ಮುಖ್ಯಸ್ಥರಾದ ನಾಗರಾಜ್ ನಾಯಕ್, ಪಿಎಸ್‌ಐ ಮಹಾಂತೇಶ್ ಕುಂಬಾರ್, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಪವನ್ ಬೊಮ್ಮನಹಳ್ಳಿ, ಗಣಪತಿ ಗಾಮದ, ಪುನೀತ್ ನಾಯ್ಕ ಉಪಸ್ಥಿತರಿದ್ದರು.

# ಮನುವಿಕಾಸದಿಂದ ಕೊರೋನಾ ವಾರಿಯರ್ಸ್‌ಗೆ ದಿನಸಿ, ಆರೈಕೆ ಕಿಟ್ ವಿತರಣೆ

ಸಿದ್ದಾಪುರ ಪಟ್ಟಣದ ಶ್ರೀ ರಾಘವೇಂದ್ರ ಮಠದ ಸಭಾಂಗಣದಲ್ಲಿ ದಿನಾಂಕ 12/6/2021ರಂದು ಮನುವಿಕಾಸ ಸಂಸ್ಥೆಯು ವಟ್ಟಿಕುಟಿ ಇಂಡಿಯಾ ಫೌಂಡೇಶನ್ ಸಹಯೋಗದಲ್ಲಿ ಸಂಘಟಿಸಿದ್ದ ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರಿಗೆ ಹಾಗೂ ಸಿದ್ದಾಪುರ ತಾಲೂಕಾ ಆಸ್ಪತ್ರೆಯ ಸಿಬ್ಬಂದಿಗಳಿಗೆ ಅಂದಾಜು 3.50 ಲಕ್ಷ ರೂ.ಗಳ ದಿನಸಿ ಕಿಟ್ ಹಾಗೂ ಕೋವಿಡ್ ಆರೈಕೆಯ ಕಿಟ್‌ಗಳನ್ನು ವಿಧಾನಸಭಾ ಅಧ್ಯಕ್ಷ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ವಿತರಿಸಿದರು.

ಈ ಸಂದರ್ಭದಲ್ಲಿ ಕೋವಿಡ್ ಆರೈಕೆ ಕೇಂದ್ರಗಳಿಗೆ ಆಗಮಿಸುವ ಸೋಂಕಿತರಿಗೆ, ಕೊರೋನಾ ಆರೈಕೆಯಲ್ಲಿ ಮುಂಚೂಣಿಯಲ್ಲಿರುವ ವೈದ್ಯಾಧಿಕಾರಿಗಳಿಗೆ ಹಾಗೂ ಆಶಾ ಕಾರ್ಯಕರ್ತೆಯರಿಗೆ ಅಗತ್ಯವಿರುವ ಸಾಮಾಗ್ರಿಗಳಾದ ಆಕ್ಸಿಜನ್ ಕಾನ್‌ಸನ್‌ಟ್ರೇಟರ್ (Oxygen Concentrator), ಫೇಸ್ ಶೀಲ್ಡ್ (Face Shield), ಎನ್– 95 ಮಾಸ್ಕ್ (N- 95 Mask), ಡಿಸ್ಪೋಸೆಬಲ್ ಬೆಡ್‌ಶೀಟ್ (disposable bed sheets) ಮತ್ತು ಪಿಲ್ಲೋಕವರ್ (Pillow cover), ತ್ರೀ ಲೇಯರ್ ಮಾಸ್ಕ್ (Three layer mask), ಪಲ್ಸ್ ಆಕ್ಸಿಮೀಟರ್ (Pulse oximeter), ಇನ್ಫ್ರಾರೆಡ್ ಥರ್ಮಾಮೀಟರ್ (Infrared thermometer), ಡಿಜಿಟಲ್ ಥರ್ಮಾಮೀಟರ್ (Digital thermometer), ಸ್ಯಾನಿಟೈಸರ್ (Sanitizer), ಇಂಡಕ್ಷನ್‌ಕುಕ್ ಸ್ಟೋವ್ (Induction Cook Stove) ಹಾಗೂ ಹ್ಯಾಂಡ್‌ಗ್ಲೌಸ್‌ಗಳನ್ನು (Hand Gloves) ತಾಲೂಕಾ ಆರೋಗ್ಯಾಧಿಕಾರಿ ಡಾ. ಲಕ್ಷ್ಮೀಕಾಂತ ನಾಯ್ಕ್ ಅವರಿಗೆ ಮನುವಿಕಾಸ ಸಂಸ್ಥೆಯ ಕಡೆಯಿಂದ ಹಸ್ತಾಂತರಿಸಲಾಯಿತು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ "ಆರೋಗ್ಯ ಸಂಬಂಧಿತ ಕ್ಷೇತ್ರದಲ್ಲಿ ಜಾಗೃತಿಯನ್ನು ಮೂಡಿಸುತ್ತಿರುವ ಆಶಾ ಕಾರ್ಯಕರ್ತೆಯರು ಮತ್ತು ವೈದ್ಯರುಗಳ ಅವಿರತ ಶ್ರಮಕ್ಕೆ ಬೆಲೆ ಕಟ್ಟಲು ಅಸಾಧ್ಯ. ಆರೈಕೆಗೆ ಬೇಕಾದ ಪೂರಕ ಸಾಮಾಗ್ರಿಗಳನ್ನು ಮಾತ್ರ ನಾವು ತಲುಪಿಸುತ್ತಿದ್ದೇವೆ. ಮುಂಬರುವ ದಿನಗಳಲ್ಲಿ ಕೋರೊನಾ ಲಸಿಕೆಯನ್ನು ಪಡೆಯಲು ಇಚ್ಛಿಸುವ ವೃದ್ಧರಿಗೆ ಆಸ್ಪತ್ರೆಗಳಿಗೆ ಬಂದು ಹೋಗಲು ವಾಹನದ ವ್ಯವಸ್ಥೆಯನ್ನು ರೂಪಿಸಲು ಮನುವಿಕಾಸ ಸಿದ್ಧತೆ ನಡೆಸುತ್ತಿದೆ" ಎಂದರು.

ಈ ಸಂದರ್ಭದಲ್ಲಿ ವಟ್ಟಿಕುಟಿ ಸಂಸ್ಥೆಯ ಅಧಿಕಾರಿ ಶ್ರೀ ರಾಜೇಶ್ ಕುಲಕರ್ಣಿ, ಟಿಎಂಎಸ್ ಅಧ್ಯಕ್ಷರಾದ ಆರ್.ಎಂ. ಹೆಗಡೆ ಬಾಳೇಸರ, ತಹಶೀಲ್ದಾರರಾದ ಪ್ರಸಾದ್ ಎಸ್. ಎ, ಕಾರ್ಯನಿರ್ವಾಹಕ ಅಧಿಕಾರಿ ಪ್ರಶಾಂತ ರಾವ್, ಸಿಪಿಐ ಕುಮಾರ್ ಕೆ, ಪಿಎಸ್‌ಐ ಮಹಾಂತೇಶ್ ಕುಂಬಾರ, ಪ.ಪಂ ಮುಖ್ಯಾಧಿಕಾರಿ ಕುಮಾರ್ ನಾಯ್ಕ್, ಲೋಕೋಪಯೋಗಿ ಇಲಾಖೆ ಎ.ಇ.ಇ ಮುದಕಣ್ಣನವರ, ಪ.ಪಂ ಸದಸ್ಯರಾದ ಮಾರುತಿ ನಾಯ್ಕ್, ಗುರುರಾಜ ಶ್ಯಾನಭಾಗ್, ನಂದನ ಬೋರ್ಕರ್, ಖ್ಯಾತ ನ್ಯಾಯವಾದಿ ರವಿ ಹೆಗಡೆ ಹೂವಿನಮನೆ ಆಸ್ಪತ್ರೆಯ ಸಿಬ್ಬಂದಿಗಳು ಸೇರಿದಂತೆ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಹಾಜರಿದ್ದರು.





# ಆರೋಗ್ಯಯುತ ಸಮಾಜ ನಿರ್ಮಾಣಕ್ಕೆ ಮನುವಿಕಾಸದ ಕೊಡುಗೆ ಅಪಾರ: ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

ಶಿರಸಿಯ ಪಂಡಿತ ಸಾವಜನಿಕ ಆಸ್ಪತ್ರೆ ಆವರಣದಲ್ಲಿ ದಿನಾಂಕ 12/6/2021 ರಂದು ಮನುವಿಕಾಸ ಸಂಸ್ಥೆಯು ವಟ್ಟಿಕುಟಿ ಇಂಡಿಯಾ ಫೌಂಡೇಶನ್ ಸಹಯೋಗದಲ್ಲಿ ಸಂಘಟಿಸಿದ್ದ ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರಿಗೆ ಹಾಗೂ ಶಿರಸಿ ತಾಲೂಕಾ ಆಸ್ಪತ್ರೆಯ ಸಿಬ್ಬಂದಿಗಳಿಗೆ ಅಂದಾಜು 3.50 ಲಕ್ಷ ರೂ.ಗಳ ದಿನಸಿ ಕಿಟ್ ಹಾಗೂ ಕೋವಿಡ್ ಆರೈಕೆಯ ಕಿಟ್‌ಗಳನ್ನು ವಿಧಾನಸಭಾ ಅಧ್ಯಕ್ಷ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ವಿತರಿಸಿದರು.






"ಕೊರೋನಾ ಬಗೆಗಿನ ಆತಂಕ ಮತ್ತು ಗೊಂದಲಗಳನ್ನು ನಿವಾರಿಸುವಲ್ಲಿ ಆಶಾ ಕಾರ್ಯಕರ್ತೆಯರು ಮತ್ತು ವೈದ್ಯಕೀಯ ಸಿಬ್ಬಂದಿಗಳ ಶ್ರಮ ಅವಿರತವಾಗಿದೆ. ಇವರ ಕಾರ್ಯಗಳಿಗೆ ನೆರವಾಗುವ ಪರಿಕರಗಳು ಹಾಗೂ ಜೀವನಾವಶ್ಯಕ ಕಿಟ್‌ಗಳನ್ನು ಮನುವಿಕಾಸ ಹಾಗೂ ವಟ್ಟಿಕುಟಿ ಸಂಸ್ಥೆಗಳು ನೀಡಿದ್ದು, ಇವರ ಕಾರ್ಯ ಶ್ಲಾಘನೀಯ. ಈ ಸಂಸ್ಥೆಗಳಿಂದ ಇನ್ನಷ್ಟು ಸಮಾಜಮುಖಿ ಕೆಲಸಗಳು ಜನಸಮುದಾಯವನ್ನು ತಲುಪಲಿ ಎಂದು ವಿಧಾನಸಭಾ ಅಧ್ಯಕ್ಷ ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು"

ಈ ಸಂದರ್ಭದಲ್ಲಿ ಕೋವಿಡ್‌ಆರೈಕೆ ಕೇಂದ್ರಗಳಿಗೆ ಆಗಮಿಸುವ ಸೋಂಕಿತರಿಗೆ, ಕೊರೋನಾ ಆರೈಕೆಯಲ್ಲಿ ಮುಂಚೂಣಿಯಲ್ಲಿರುವ ವೈದ್ಯಾಧಿಕಾರಿಗಳಿಗೆ ಹಾಗೂ ಆಶಾ ಕಾರ್ಯಕರ್ತೆಯರಿಗೆ ಅಗತ್ಯವಿರುವ ಸಾಮಾಗ್ರಿಗಳಾದ ಆಕ್ಸಿಜನ್ ಕಾನ್‌ಸನ್‌ಟ್ರೇಟರ್, ಫೇಸ್ ಶೀಲ್ಡ್ ಎನ್ 95 ಮಾಸ್ಕ್, ಡಿಸ್ಪೋಸೆಬಲ್ ಬೆಡ್‌ಶೀಟ್ ಮತ್ತು ಪಿಲ್ಲೋ ಕವರ್, ತ್ರೀ ಲೇಯರ್ ಮಾಸ್ಕ್, ಪಲ್ಸ್ ಆಕ್ಸಿಮೀಟರ್, ಇನ್ಫ್ರಾರೆಡ್ ಥರ್ಮಾಮೀಟರ್, ಡಿಜಿಟಲ್ ಥರ್ಮಾಮೀಟರ್, ಸ್ಯಾನಿಟೈಸರ್, ಇಂಡಕ್ಷನ್ ಕುಕ್ ಸ್ಟೋವ್ ಹಾಗೂ ಹ್ಯಾಂಡ್‌ಗ್ಲೌಸ್‌ಗಳನ್ನು ಮನುವಿಕಾಸ ಸಂಸ್ಥೆಯ ಕಡೆಯಿಂದ ಹಸ್ತಾಂತರಿಸಲಾಯಿತು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ. ಗಣಪತಿ ಭಟ್ಟ ಮಾತನಾಡಿ "ಮನುವಿಕಾಸ ಸಂಸ್ಥೆಯು ಈಗಾಗಲೇ ನೆಲ–ಜಲ ಸಂರಕ್ಷಣೆ, ಗ್ರಾಮೀಣಾಭಿವೃದ್ಧಿಯ ಜೊತೆಗೆ ಆರೋಗ್ಯ ಸಂಬಂಧಿತ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿದೆ. ಆಶಾ ಕಾರ್ಯಕರ್ತೆಯರು ಹಾಗೂ ವೈದ್ಯರಿಗೆ ಬೇಕಾದ ಮೂಲಭೂತ ಸಾಮಾಗ್ರಿಗಳನ್ನು ಸಂಸ್ಥೆಯ ವತಿಯಿಂದ ನೀಡಲಾಗುತ್ತಿದ್ದು, ಇದು ಸಮುದಾಯವನ್ನು ತಲುಪಿ, ಆರೋಗ್ಯಯುತ ಸಮಾಜ ನಿರ್ಮಾಣ ಮಾಡುವಲ್ಲಿ ನೆರವಾಗುತ್ತದೆ ಎಂದು ಭಾವಿಸುತ್ತೇನೆ"ಎಂದರು.

ಈ ಸಂದರ್ಭದಲ್ಲಿ ವಟ್ಟಿಕುಟಿ ಸಂಸ್ಥೆಯ ಅಧಿಕಾರಿ ರಾಜೇಶ ಕುಲಕರ್ಣಿ ಮಾತನಾಡಿ, "ವಟ್ಟಿಕುಟಿ ಇಂಡಿಯಾ ಫೌಂಡೇಶನ್ ಈಗಾಗಲೇ ಸಮಾಜದ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುತ್ತಿದ್ದು, ಅಭಿವೃದ್ಧಿ ವಿಷಯಗಳ ಪರ ಹೆಚ್ಚಿನ ಒಲವನ್ನು ಹೊಂದಿದೆ. ಕೋವಿಡ್–19 ಸಂದರ್ಭದಲ್ಲಿ ಜನರ ಆರೋಗ್ಯದ ಕಾಳಜಿಯನ್ನು ಅರಿತು, ಅದರ ಆರೈಕೆಗೆ ಬೇಕಾದ ವೈದ್ಯಕೀಯ ಉಪಕರಣಗಳನ್ನು ಸಂಸ್ಥೆಯು ನೀಡುತ್ತಿದ್ದು, ಇದು ಸೂಕ್ತ ರೀತಿಯಲ್ಲಿ ಅಗತ್ಯತೆ ಇರುವವರನ್ನು ತಲುಪಲಿ ಎಂದು ಆಶಿಸುತ್ತೇನೆ" ಎಂದರು. ಕಾರ್ಯಕ್ರಮದಲ್ಲಿ ತಾಲೂಕಾ ಆಸ್ಪತ್ರೆಯ ಪದಾಧಿಕಾರಿಗಳು, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಹಾಜರಿದ್ದರು.





# ಮನುವಿಕಾಸ ಸಂಸ್ಥೆಯಿಂದ 2020–21ನೇ ಸಾಲಿನಲ್ಲಿ ಪುನಶ್ಚೇತನಗೊಂಡ ಕೆರೆಗಳ ವಿವರ ಇಲ್ಲಿದೆ.

| ಕ್ರಮ ಸಂಖ್ಯೆ | ಕೆರೆ ಹೆಸರು | ಗ್ರಾಮ | ಪಂಚಾಯತ | ತಾಲೂಕ | ಜಿಲ್ಲೆ | ಎಕರೆ |
|---|---|---|---|---|---|---|
| 1 | ಹೊಲಗಟ್ಟಿಕೆರೆ | ಬಾಚಣಕಿ | ಬಾಚಣಕಿ | ಮುಂಡಗೊಡ | ಉತ್ತರಕನ್ನಡ | 10.36.00 |
| 2 | ಶಿವಲಿಂಗಪ್ಪನ ಕಟ್ಟಿಕೆರೆ | ಬಾಳಂಬೀಡ | ಬಾಳಂಬೀಡ | ಹಾನಗಲ್ | ಹಾವೇರಿ | 03.20.00 |
| 3 | ಗೇರಗಟ್ಟಿಕೆರೆ | ಕಾಲುವೆ ಯಲ್ಲಾಪುರ | ಬಾಳಂಬೀಡ | ಹಾನಗಲ್ | ಹಾವೇರಿ | 09.23.00 |
| 4 | ಅಡಿಕೆ ಹಾಲಕಟ್ಟಿ ಕೆರೆ | ಬಾಳಂಬೀಡ | ಬಾಳಂಬೀಡ | ಹಾನಗಲ್ | ಹಾವೇರಿ | 03.15.00 |
| 5 | ಸೂಳಕಟ್ಟೆ ಕೆರೆ | ಕುಪ್ಪಗಡ್ಡೆ | ಬದನಗೋಡ | ಶಿರಸಿ | ಉತ್ತರಕನ್ನಡ | 02.17.00 |
| 6 | ಹೊಲಗಟ್ಟಿ ಕೆರೆ | ಸಿರಿನಾಯಕನಕೊಪ್ಪ | ತತ್ತೂರು | ಸೊರಬ | ಶಿವಮೊಗ್ಗ | 12.00.00 |
| 7 | ಜತ್ತಿಕಟ್ಟಿ ಕೆರೆ | ನೆಲ್ಲಿಕೊಪ್ಪ | ಬೊಮ್ಮನಹಳ್ಳಿ | ಹಾನಗಲ್ | ಹಾವೇರಿ | |
| 8 | ಕೊಂತಗೇರಿ ಕೆರೆ | ನಿಟ್ಟಕ್ಕಿ | ಗೆಂಡ್ಲಾ | ಸೊರಬ | ಶಿವಮೊಗ್ಗ | 07.05.00 |
| 9 | ಜಿಗಳಿ ಕೆರೆ | ಅರಳಿಹೊಂಡ | ತಾವರಗೆರೆ | ಕಲಘಟಗಿ | ಧಾರವಾಡ | 04.15.00 |
| 10 | ಕೊಂಟ ಗೆರಿ ಕೆರೆ | ಶಾಡಗುಪ್ಪಿ | ಶಾಡಗುಪ್ಪಿ | ಹಾನಗಲ್ | ಹಾವೇರಿ | 18.20.00 |
| 11 | ಕುರುಬನಕಟ್ಟಿ ಕೆರೆ | ನೆಲ್ಲಿಹರವಿ | ಬಮ್ಮಿಗಟ್ಟಿ | ಕಲಘಟಗಿ | ಧಾರವಾಡ | 02.21.00 |
| 12 | ಹೇಲಗಟ್ಟಿ ಕೆರೆ | ಯಲವಟ್ಟಿ | ಯಲವಟ್ಟಿ | ಹಾನಗಲ್ | ಹಾವೇರಿ | |
| 13 | ಕಾಡನಕಟ್ಟಿ ಕೆರೆ | ಯತ್ತಿನಳ್ಳಿ | ಮಲಗುಂದ | ಹಾನಗಲ್ | ಹಾವೇರಿ | 08.20.00 |
| 14 | ಕಟ್ಟಿಕೆರೆ | ತಾವರಗೆರೆ | ತಾವರಗೆರೆ | ಕಲಘಟಗಿ | ಧಾರವಾಡ | 03.26.00 |
| 15 | ಬಡಗಿಕಟ್ಟಿ ಕೆರೆ | ಕುಪ್ಪಗಡ್ಡೆ | ತತ್ತೂರು | ಸೊರಬ | ಶಿವಮೊಗ್ಗ | 02.30.00 |
| 16 | ದೇಸಾಯಿ ಕೆರೆ | ದಾಸ್ತಿಕೊಪ್ಪ | ದಾಸ್ತಿಕೊಪ್ಪ | ಕಲಘಟಗಿ | ಧಾರವಾಡ | 03.17.00 |
| 17 | ಜೌಳಕಟ್ಟೆ ಕೆರೆ | ತತ್ತೂರು | ತತ್ತೂರು | ಸೊರಬ | ಶಿವಮೊಗ್ಗ | 04.00.00 |
| 18 | ಒಡ್ಡಿನಕೆರೆ | ಅರಳಿಹೊಂಡ | ತಾವರಗೆರೆ | ಕಲಘಟಗಿ | ಧಾರವಾಡ | 03.30.00 |
| 19 | ಹಿರೆಕೆರೆ | ಆಲದಕಟ್ಟಿ | ತಾವರಗೆರೆ | ಕಲಘಟಗಿ | ಧಾರವಾಡ | 10.27.00 |
| 20 | ಲೊಕಮ್ಮನಕಟ್ಟಿ ಕೆರೆ | ಹಿರೇಕಾಂಶಿ | ಗೊಂದಿ | ಹಾನಗಲ್ | ಹಾವೇರಿ | |
| 21 | ಆನೆಗೊಂಡವ್ವನಕಟ್ಟಿ ಕೆರೆ | ಮಜ್ಜಿಗೇರಿ | ಬಾಚಣಕಿ | ಮುಂಡಗೊಡ | ಉತ್ತರಕನ್ನಡ | 02.26.00 |
| 22 | ದೊಡ್ಡಕೆರೆ | ಕೊಪ್ಪರಸಿಕೊಪ್ಪ | ಕೊಪ್ಪರಸಿಕೊಪ್ಪ | ಹಾನಗಲ್ | ಹಾವೇರಿ | 22.09.00 |
| 23 | ಹೊಸಕೊಪ್ಪ ಕೆರೆ | ಹೊಸಕೊಪ್ಪ | ಬದನಗೊಡ | ಶಿರಸಿ | ಉತ್ತರಕನ್ನಡ | 05.00.00 |
| 24 | ಕಡ್ಲೆಕಟ್ಟಿ ಕೆರೆ | ಕಲ್ಲುಗಡ್ಡೆ | ಕಿರವಾಡಿ | ಹಾನಗಲ್ | ಹಾವೇರಿ | 12.00.00 |
| 25 | ತಾರೆಕಟ್ಟಿ ಕೆರೆ | ಸಿರಿನಾಯಕನಕೊಪ್ಪ | ತತ್ತೂರು | ಸೊರಬ | ಶಿವಮೊಗ್ಗ | 20.00.00 |
| 26 | ಸರ್ಕಾರಿ ಕೆರೆ | ದಾಸ್ತಿಕೊಪ್ಪ | ದಾಸ್ತಿಕೊಪ್ಪ | ಕಲಘಟಗಿ | ಧಾರವಾಡ | 02.20.00 |
| 27 | ಹಲಗಿನಕಟ್ಟಿ ಕೆರೆ | ದೇವಿಕೊಪ್ಪ | ದೇವಿಕೊಪ್ಪ | ಕಲಘಟಗಿ | ಧಾರವಾಡ | 03.02.00 |
| 28 | ಜೊಂಡಿ ಕೆರೆ | ತುಮರಿಕೊಪ್ಪ | ಬೇಗೂರ | ಕಲಘಟಗಿ | ಧಾರವಾಡ | 09.18.00 |
| 29 | ಕಂಬಾಳ ಕೆರೆ | ತುಮರಿಕೊಪ್ಪ | ಬೇಗೂರ | ಕಲಘಟಗಿ | ಧಾರವಾಡ | 03.00.00 |
| 30 | ಬಿದರಮುಳಿಯವರ ಕೆರೆ | ಬೊಮ್ಮಿಗಟ್ಟಿ | ಬೊಮ್ಮಿಗಟ್ಟಿ | ಕಲಘಟಗಿ | ಧಾರವಾಡ | 05.32.00 |
| 31 | ಜೊಂಡ ಕೆರೆ | ಹುನುಗುಂದ | ಹುನುಗುಂದ | ಮುಂಡಗೊಡ | ಉತ್ತರಕನ್ನಡ | 06.23.00 |
| 32 | ಸತ್ತೇರಗಟ್ಟಿ ಕೆರೆ | ಬೊಮ್ಮಿಗಟ್ಟಿ | ಬೊಮ್ಮಿಗಟ್ಟಿ | ಕಲಘಟಗಿ | ಧಾರವಾಡ | 04.00.00 |
| 33 | ಅವರಿಕೆರೆ | ಹುಲಿಹೊಂಡ | ನಂದಿಕಟ್ಟಾ | ಮುಂಡಗೊಡ | ಉತ್ತರಕನ್ನಡ | 08.14.00 |
| 34 | ಕಾನಕಟ್ಟೆ ಕೆರೆ | ಅಂಡಗಿ | ಅಂಡಗಿ | ಶಿರಸಿ | ಉತ್ತರಕನ್ನಡ | |
| 35 | ಸಾಣಿಕಟ್ಟಿ ಕೆರೆ | ದನಗನಹಳ್ಳಿ | ಬದನಗೊಡ | ಶಿರಸಿ | ಉತ್ತರಕನ್ನಡ | 05.33.00 |
| 36 | ಬಳಗೇರಿ ಕೆರೆ | ಮಲಗುಂದ | ಮಲಗುಂದ | ಹಾನಗಲ್ | ಹಾವೇರಿ | 09.00.00 |
| 37 | ಬಳಗಟ್ಟಿ ಕೆರೆ | ಕಿರವಾಡಿ | ಕಿರವಾಡಿ | ಹಾನಗಲ್ | ಹಾವೇರಿ | 08.31.00 |
| 38 | ಗವಳ್ಯಾನ್‌ಕಟ್ಟಿ ಕೆರೆ | ಹನುಮಾಪುರ | ಬೆಳವಂತರ | ಕಲಘಟಗಿ | ಧಾರವಾಡ | 03.25.00 |
| 39 | ಬೆಣ್ಣಿಕೆರೆ | ಹುಲ್ಲಂಬಿ | ಬೇಗೂರ | ಕಲಘಟಗಿ | ಧಾರವಾಡ | 05.30.00 |
| 40 | ಅಫೀನಕೆರೆ | ಬೇಗೂರ | ಬೇಗೂರ | ಕಲಘಟಗಿ | ಧಾರವಾಡ | 04.17.00 |
| 41 | ಬೆಳವಲಕಟ್ಟಿ ಕೆರೆ | ಕೂಸನೂರು | ಕೂಸನೂರು | ಹಾನಗಲ್ | ಹಾವೇರಿ | 14.01.00 |
| 42 | ಕುಲಮಿಯಲ್ಲಾಪುರ | ಆರೆಗೊಪ್ಪ | ಹುಲ್ಲತ್ತಿ | ಹಾನಗಲ್ | ಹಾವೇರಿ | 03.26.00 |
| 43 | ಊರಮುಂದಿನ ದೊಡ್ಡಕೆರೆ | ಗುಡ್ಡೆಕೊಪ್ಪ | ಉದ್ರಿ | ಸೊರಬ | ಶಿವಮೊಗ್ಗ | 27.18.00 |

| ಕ್ರಮ ಸಂಖ್ಯೆ | ಕೆರೆ ಹೆಸರು | ಗ್ರಾಮ | ಪಂಚಾಯತ | ತಾಲೂಕ | ಜಿಲ್ಲೆ | ಎಕರೆ |
|---|---|---|---|---|---|---|
| 44 | ಗೋಳಿಕಟ್ಟಾ ಕೆರೆ | ಗೊಳಿಕಟ್ಟಾ | ಗುಡ್ನಾಪುರ | ಶಿರಸಿ | ಉತ್ತರಕನ್ನಡ | 03.20.00 |
| 45 | ಅವರೆಕೆರೆ | ಆಲದಕಟ್ಟಿ | ತಾವರೆಗೆರೆ | ಕಲಘಟಗಿ | ಧಾರವಾಡ | 02.26.00 |
| 46 | ಬೆಂಡೆಕಟ್ಟೆಕೆರೆ | ತತ್ತೂರು | ತತ್ತೂರು | ಸೊರಬ | ಶಿವಮೊಗ್ಗ | 08.13.00 |
| 47 | ಬೇವಿನಕಟ್ಟೆ ಕೆರೆ | ಸೋಮಸಾಗರ | ಸೋಮಸಾಗರ | ಹಾನಗಲ್ | ಹಾವೇರಿ | 08.05.00 |
| 48 | ಉಜ್ಜಪ್ಪನಕಟ್ಟೆ ಕೆರೆ | ಹಳ್ಳಿಬೈಲ್ | ಹಳ್ಳಿಬೈಲ್ | ಹಾನಗಲ್ | ಹಾವೇರಿ | 02.38.00 |
| 49 | ಕುರುಡುಕೋಣನ ಕೆರೆ | ಉದ್ರಿವಡಗೇರಿ | ಉದ್ರಿ | ಸೊರಬ | ಶಿವಮೊಗ್ಗ | 04.03.00 |
| 50 | ಅಗಸೆಬಾಗಿಲ ಕೆರೆ | ಜಡ್ಡಿಹಳ್ಳಿ | ದ್ಯಾವನಳ್ಳಿ | ಸೊರಬ | ಶಿವಮೊಗ್ಗ | 08.35.00 |
| 51 | ಸಿದ್ದಪ್ಪನಕಟ್ಟೆ ಕೆರೆ | ಸಂತೊಳ್ಳಿ | ಬದನಗೊಡ | ಶಿರಸಿ | ಉತ್ತರಕನ್ನಡ | 04.38.00 |
| 52 | ಬಸವನಕಟ್ಟೆ ಕೆರೆ | ಸಾಗರವಳ್ಳಿ | ಮಂತಗಿ | ಹಾನಗಲ್ | ಹಾವೇರಿ | 03.08.00 |
| 53 | ಹಿರೆಕೆರೆ | ಬದನಗೋಡ | ಬದನಗೋಡ | ಶಿರಸಿ | ಉತ್ತರಕನ್ನಡ | 08.10.00 |
| 54 | ಕಂಚಿಕೊಪ್ಪ | ಬದನಗೋಡ | ಬದನಗೋಡ | ಶಿರಸಿ | ಉತ್ತರಕನ್ನಡ | 07.06.00 |
| 55 | ಮುಗಳಿ ಕೆರೆ | ಬಿಸರಳ್ಳಿ | ಬೇಗೂರ | ಕಲಘಟಗಿ | ಧಾರವಾಡ | 04.37.00 |
| 56 | ಹೊನ್ನಿಮರಿ ಕೆರೆ | ಧೂಳಿಕೊಪ್ಪ | ಹಿರೆಹೊನ್ನಳ್ಳಿ | ಕಲಘಟಗಿ | ಧಾರವಾಡ | 02.35.00 |
| 57 | ಹಿರೆಕೆರೆ | ಮರಗುಂಡಿ | ಹಲಗದ್ದೆ | ಶಿರಸಿ | ಉತ್ತರಕನ್ನಡ | 18.00.00 |
| 58 | ಬಸಪ್ಪನ ಕೆರೆ | ತಾವರಗೆರೆ | ತಾವರಗೆರೆ | ಕಲಘಟಗಿ | ಧಾರವಾಡ | 09.00.00 |
| 59 | ಬೆಂಡೆಕಟ್ಟೆ ಕೆರೆ | ನೆಗವಾಡಿ | ತತ್ತುರು | ಸೊರಬ | ಶಿವಮೊಗ್ಗ | 04.00.00 |
| 60 | ಜಿಗಳಿ ಕೆರೆ | ಅಂದಲಗಿ | ನಾಗನೂರು | ಮುಂಡಗೊಡ | ಉತ್ತರಕನ್ನಡ | 13.32.00 |
| 61 | ಮುತ್ತಲ ಕೆರೆ | ಬಾದಾಮಗಟ್ಟಿ | ಯಲವಟ್ಟಿ | ಹಾನಗಲ್ | ಹಾವೇರಿ | 03.26.00 |
| 62 | ಜಾಡ್ನಿಕೆರೆ | ಹಿರೆಕಾಂಶಿ | ಗೊಂದಿ | ಸೊರಬ | ಶಿವಮೊಗ್ಗ | 08.31.00 |
| 63 | ಗುಡೆಕೆರೆ | ಮಳಲಗಾಂವ | ಬಿಸಲಕೊಪ್ಪ | ಶಿರಸಿ | ಉತ್ತರಕನ್ನಡ | 03.18.00 |
| 64 | ಕಳ್ಳಿ ಕೆರೆ | ಮುಕ್ಕಾಲ | ಮುಕ್ಕಾಲ | ಕಲಘಟಗಿ | ಧಾರವಾಡ | 02.02.00 |
| 65 | ಅತ್ತಿಗೇರಿ ಕೆರೆ | ರಂಗಾಪುರ | ಬೇಗೂರ | ಕಲಘಟಗಿ | ಧಾರವಾಡ | 02.38.00 |
| 66 | ದೊಡ್ಡಕೆರೆ | ಮಾಳಂಜಿ | ಬಂಕನಾಳ | ಶಿರಸಿ | ಉತ್ತರಕನ್ನಡ | 19.20.00 |
| 67 | ಸಲಗಟ್ಟಿ ಕೆರೆ | ಸಾವಿಕೆರೆ | ಸಮ್ಮಸಗಿ | ಹಾನಗಲ್ | ಹಾವೇರಿ | 06.00.00 |







...ಪುಟ 1 ರಿಂದ

ಇವೆಲ್ಲವನ್ನು ಗಮನದಲ್ಲಿ ಇರಿಸಿಕೊಂಡು ಮಹಿಳೆಯರಿಗೆ ಸಮಾಜದಲ್ಲಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ ಎನ್ನುವುದನ್ನು ಸಾಧಿಸಿ ತೋರಿಸಲು ಮನುವಿಕಾಸ ಸಂಸ್ಥೆ **ಈಡಲ್‌ಗೀವ್ ಫೌಂಡೇಶನ್**ನ ಸಹಯೋಗದೊಂದಿಗೆ 2018ರಿಂದ ಮಹಿಳಾ ಸಬಲೀಕರಣ ಮತ್ತು ಸ್ವಾವಲಂಬನೆಯನ್ನೇ ಮುಖ್ಯ ಗುರಿಯನ್ನಾಗಿರಿಸಿಕೊಂಡು ಸಮಾಜಮುಖಿ ಕೆಲಸವನ್ನು ಮಾಡುತ್ತಿದೆ. ಮಹಿಳೆಯರಿಗಾಗಿಯೇ ಆರ್ಥಿಕ ಸ್ವಾವಲಂಬನೆ, ಶಿಕ್ಷಣ, ಉದ್ಯಮಶೀಲತಾ ಅಭಿವೃದ್ಧಿ ಮನೋಭಾವನೆಯನ್ನು ಬೆಳೆಸಲು ಮತ್ತು ಹಲವಾರು ನೂತನ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ.

## ಸ್ವ ಸಹಾಯ ಸಂಘಗಳ ನಿರ್ಮಾಣದಿಂದ ಉಳಿತಾಯ ಮನೋಭಾವನೆಗೆ ಭದ್ರ ಬುನಾದಿ.

ಮನುವಿಕಾಸವು ಸಮಾಜದ ಅಸಂಘಟಿತ ಮಹಿಳೆಯರನ್ನು ಗುರುತಿಸಿ ಸ್ವ-ಸಹಾಯ ಗುಂಪು ಅಥವಾ ಜಂಟಿ ಹೊಣೆಗಾರಿಕೆ ಗುಂಪುಗಳನ್ನು ಆರಂಭಿಸಿದೆ ಮತ್ತು ಉತ್ಪಾದಕರ ಸಂಘಟನೆಯನ್ನು ಒಕ್ಕೂಟದ ಅಡಿಯಲ್ಲಿ ನಿರ್ಮಿಸಿದೆ. ಸಂಘಗಳಲ್ಲಿ ಊರಿನ ಅಕ್ಕಪಕ್ಕದ ಮನೆಯ ಮಹಿಳೆಯರು ಒಟ್ಟುಗೂಡಿ ಸಣ್ಣ ಗುಂಪನ್ನು ಮಾಡಿಕೊಂಡು, ಅದರಲ್ಲಿ ಉಳಿತಾಯ ಮಾಡಿ, ಸಾಲ ಸೌಲಭ್ಯವನ್ನು ಪಡೆದು, ಸ್ವಂತ ಉದ್ಯೋಗವನ್ನು ಮಾಡಿ ಸಮಾಜದಲ್ಲಿ ಉತ್ತಮ ಆದರ್ಶಜೀವನ ನಡೆಸಲು ಮನುವಿಕಾಸ ಸಂಸ್ಥೆ ಅನುವು ಮಾಡಿಕೊಟ್ಟಿದೆ.

ಮನುವಿಕಾಸ ಸಂಸ್ಥೆಯು ಈಡಲ್‌ಗೀವ್ ಸಂಸ್ಥೆಯೊಂದಿಗೆ ಸೇರಿ ಆರ್ಥಿಕ ಸೇರ್ಪಡೆ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ 2020ರ ವೇಳೆಗೆ ಉತ್ತರಕನ್ನಡ ಜಿಲ್ಲೆಯಲ್ಲಿ ಸಾಮಾನ್ಯ ವೇದಿಕೆಯಡಿ 3500 ಗ್ರಾಮೀಣ ಬಡ ಮಹಿಳೆಯರ ಜೀವನ ಸುಧಾರಿಸುವ ಉದ್ದೇಶದಿಂದ ಈಡಲ್‌ಗೀವ್ ಫೌಂಡೇಶನ್ ಜತೆಗೂಡಿ ಯೋಜನೆಯನ್ನು ಅನುಷ್ಠಾನಗೊಳಿಸಿದೆ.

ಸ್ವ-ಸಹಾಯ ಪರಿಕಲ್ಪನೆ, ಆರ್ಥಿಕ ಅನುಕೂಲ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಬಳಕೆಯ ಮುಖಾಂತರ ಸಮುದಾಯದ ಜೀವನೋಪಾಯವನ್ನು ಸುಧಾರಿಸುವುದು ಮನುವಿಕಾಸದ ಪ್ರಮುಖ ಆದ್ಯತೆಯಾಗಿದೆ. ಈಡಲ್‌ಗೀವ್ ಫೌಂಡೇಶನ್ ಬೆಂಬಲಿಸುತ್ತಿರುವ ಈ ಯೋಜನೆಯು ಸಂಸ್ಥೆಯ ಪ್ರಮುಖ ಕಾರ್ಯಕ್ರಮವಾಗಿದೆ ಮತ್ತು ಸಂಸ್ಥೆಯ ಒಟ್ಟಾರೆ ಗುರಿಯೂ ಆಗಿದೆ. ಅಲ್ಲದೇ ಸಮುದಾಯ ಆಧಾರಿತ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು ಮನುವಿಕಾಸದ ಉದ್ದೇಶವಾಗಿದೆ.

ಇದರ ಜೊತೆಜೊತೆಗೆ ಸಂಘದ ಸದಸ್ಯರಿಗೆ ಸಂಘವನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಲು ಅನುಕೂಲವಾಗಲೆಂದು ಒಕ್ಕೂಟಸಭೆಗಳನ್ನು ಆಯೋಜಿಸಿ ಸಂಘದ ಸಮಸ್ಯೆಗಳನ್ನು ಪರಸ್ಪರ ಚರ್ಚಿಸಿ ಬಗೆಹರಿಸುವ ಪ್ರಯತ್ನವನ್ನೂ ಮಾಡುತ್ತಿದೆ. ಇದರಿಂದಾಗಿ ಸಂಘವನ್ನು ಪಾರದರ್ಶಕವಾಗಿ ಉತ್ತಮವಾಗಿ ನಡೆಸಿಕೊಂಡು ಹೋಗಲು ಅನುಕೂಲವಾಗಿದೆ. ಒಕ್ಕೂಟ ಸಭೆಗಳಲ್ಲಿ ಮುಖ್ಯವಾಗಿ ಸಂಘಕ್ಕೆ ಹಣಕಾಸಿನ ಅಗತ್ಯತೆಗಳು ಸಂಘದ ನಾಯಕರುಗಳ ಬದಲಾವಣೆ, ಸಂಘದ ಅಗತ್ಯತೆಗಳು, ಕಾನೂನು ಬದ್ಧವಾಗಿ ಮಹಿಳೆಯರಿಗೆ ಬೆಂಬಲ, ಕೌಶಲ್ಯಾಭಿವೃದ್ಧಿ ತರಬೇತಿಗಳ ಅಗತ್ಯತೆಗಳ ಬಗೆಗೆ ಹೆಚ್ಚಿನ ಚರ್ಚೆ ನಡೆಸಿದ್ದಾರೆ.

## ಯೋಜನೆಯ ಉದ್ದೇಶಗಳು:

1. **ಆರ್ಥಿಕ ಸೇರ್ಪಡೆ ಮೂಲಕ ಹಿಂದುಳಿದ ಸಮುದಾಯದವರ ಆದಾಯ ಸುಧಾರಿಸುವುದು.**
2. **ಕೌಶಲ್ಯ ವೃದ್ಧಿ ಮತ್ತು ಸ್ವ-ಸಹಾಯ ಪರಿಕಲ್ಪನೆ ಮುಖಾಂತರ ಮಹಿಳೆಯರ ಜೀವನಮಟ್ಟವನ್ನು ಸುಧಾರಿಸುವುದು.**
3. **ಉದ್ಯಮಶೀಲತೆ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಬೆಂಬಲಿಸಲು ಸ್ವ-ಸಹಾಯ ಸಂಘ ಮತ್ತು ಸಹಕಾರಿ ಸಂಘಗಳ ಅಡಿಯಲ್ಲಿ ಮಹಿಳಾ ಸದಸ್ಯರ ಒಕ್ಕೂಟ ನಿರ್ಮಿಸುವುದು.**
4. **ಒಕ್ಕೂಟಗಳ ಮುಖಾಂತರ ಸರಕಾರಿ ಯೋಜನೆಗಳ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು.**
5. **ಸ್ವ-ಸಹಾಯ ಸಂಘದ ಬಡ ಸದಸ್ಯರಿಗೆ ಮಾಸ್ಕ್ ಹೊಲೆಯಲು ಉತ್ತಮ ಗುಣಮಟ್ಟದ ಬಟ್ಟೆಗಳನ್ನು ಒದಗಿಸುವುದು ಮತ್ತು ಇತರ ಅಗತ್ಯ ಅವಶ್ಯಕತೆಗಳನ್ನು ಪೂರೈಸುವುದು, ಹೊಲಿಗೆ ತರಬೇತಿ ನೀಡುವುದು.**
6. **ಸಣ್ಣ ಮತ್ತು ಅತಿ ಸಣ್ಣ ರೈತರ ಆದಾಯವನ್ನು ಉತ್ತಮಗೊಳಿಸಲು ನೀರಿನ ಸಂರಕ್ಷಣೆಯ ವಿನ್ಯಾಸಗಳ ಮೂಲಕ ನೀರಾವರಿ ಪ್ರದೇಶವನ್ನು ಸುಧಾರಿಸುವುದು.**

**ಈ ಮೇಲಿನ ಉದ್ದೇಶಗಳನ್ನು ಹೊಂದಿದ್ದ ಮನುವಿಕಾಸವು ಸಂಘದ ಸದಸ್ಯರಿಗೆ ಹಲವು ಆರ್ಥಿಕ ಸ್ವಾವಲಂಬಿ ಚಟುವಟಿಕೆಗಳನ್ನು ರೂಪಿಸಿ ಸಾಲ ಸೌಲಭ್ಯದ ವ್ಯವಸ್ಥೆಯನ್ನೂ ಮಾಡಿದೆ ಮತ್ತು ಆಯ್ದ ಮಹಿಳೆಯರಿಗೆ ಪ್ರತ್ಯೇಕವಾಗಿ ವೈಯಕ್ತಿಕ ಸಾಲವನ್ನು ಪ್ರಗತಿ ಮಿತ್ರ ಸೌಹಾರ್ದ ಸಹಕಾರಿ ಅಡಿಯಲ್ಲಿ ನೀಡಿದ್ದು ಅವರಿಗೆ ಬೇಕಾದ ಸೂಕ್ತ ತರಬೇತಿಯನ್ನು ಸಹ ನೀಡಿದೆ. ಅದರಲ್ಲಿ ಮುಖ್ಯವಾದವುಗಳೆಂದರೆ ವಾಹನ ಚಾಲನಾ ತರಬೇತಿ, ಕಂಪ್ಯೂಟರ್ ತರಬೇತಿ, ಬ್ಯೂಟಿ ಪಾರ್ಲರ್ ತರಬೇತಿ, ಹೊಲಿಗೆ ತರಬೇತಿ, ಡೇರಿ ನಿರ್ವಹಣೆ ತರಬೇತಿ ಇತ್ಯಾದಿ. ಈ ಚಟುವಟಿಕೆಗಳ ಮುಖಾಂತರ ಸ್ವಯಂ ಉದ್ಯೋಗಕ್ಕೆ ನಾಂದಿ ಹಾಡಿದೆ. ಸ್ವಯಂ ಉದ್ಯೋಗ ಮಾಡುತ್ತೇವೆ ಎಂದು ಬಂದವರಿಗೆ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಮನುವಿಕಾಸ ಸಂಸ್ಥೆ ಸೂಕ್ತ ಮಾರ್ಗದರ್ಶನ ನೀಡಿದೆ.**








ಸಂಘದ ಮಹಿಳೆಯರು ಸಂಘದ ಚಟುವಟಿಕೆಗಳಿಂದಾಗಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿಯೂ ಮುಂದೆ ಬಂದಿದ್ದಾರೆ. ಅವರ ಆತ್ಮಬಲ ಹೆಚ್ಚಾಗಲು ಸಂಘದ ಒಡನಾಟವೇ ಕಾರಣ. ಬ್ಯಾಂಕಿನ ವ್ಯವಹಾರಗಳು, ಉಳಿತಾಯದ ಹಣದಲ್ಲಿ ಮನೆ ಮತ್ತು ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ನೋಡಿಕೊಂಡು ಮನೆಗೆ ಬೇಕಾದ ಅಗತ್ಯ ವಸ್ತುಗಳನ್ನು ಅವರೇ ಖರೀದಿಸುತ್ತಿದ್ದಾರೆ. ಇನ್ನೂ ಅಚ್ಚರಿಯ ಅಂಶವೆಂದರೆ ಸಂಘದ ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದು.

ಸ್ವಯಂ ಉದ್ಯೋಗ ಮಾಡುವವರಿಗೆ, ಅವರಿಗೆ ಅಗತ್ಯವಿರುವ ಹೊಲಿಗೆ ಯಂತ್ರ, ಮೀನು ಸಂಗ್ರಹಣೆಗೆ ಪೆಟ್ಟಿಗೆಗಳು, ಕೋಳಿ ಸಾಕಣಿಕೆಗೆ ಕೋಳಿ ಮರಿಗಳ ವಿತರಣೆ ಹೀಗೆ ಹಲವಾರು ವಾಣಿಜ್ಯ ಚಟುವಟಿಕೆಗಳ ಮೂಲಕ ಅವರನ್ನು ಸ್ವಯಂ ಉದ್ಯೋಗಕ್ಕೆ ಪ್ರೇರೇಪಿಸಿದೆ. ಬ್ಯಾಂಕ್‌ಖಾತೆ ಮತ್ತು ಉಳಿತಾಯದ ಮುಖಾಂತರ 418 ಸ್ವ–ಸಹಾಯ ಗುಂಪುಗಳು ಮತ್ತು 92 ಜಂಟಿ ಹೊಣೆಗಾರಿಕೆ ಗುಂಪುಗಳ 4759 ಮಹಿಳಾ ಸದಸ್ಯರನ್ನು ಆರ್ಥಿಕತೆಗೆ ಒಳಪಡಿಸಲಾಗಿದೆ.

ಒಕ್ಕೂಟ ಸಭೆಗಳ ಮೂಲಕ 10839ಕ್ಕೂ ಅಧಿಕ ಮಹಿಳಾ ಸದಸ್ಯರಿಗೆ ಆರ್ಥಿಕ ಜಾಗೃತಿ ಮೂಡಿಸಲಾಗಿದೆ. ಸಂಸ್ಥೆಯು ಸ್ವ–ಸಹಾಯ ಸಂಘ ಮತ್ತು ಜಂಟಿ ಹೊಣೆಗಾರಿಕೆ ಗುಂಪುಗಳ ಸಾಲ ಸೌಲಭ್ಯಕ್ಕಾಗಿ ವಟ್ಟಿಕುಟಿ ಇಂಡಿಯಾ ಫೌಂಡೇಶನ್ ಜತೆಗೆ ಒಪ್ಪಂದ ಮಾಡಿಕೊಂಡಿದ್ದು, ರೂ. 33535000 ಗಳ ಮೊತ್ತದ ಸಾಲ ಸೌಲಭ್ಯ ದೊರೆತಿದೆ. ಸ್ವ–ಸಹಾಯ ಸಂಘದ ಸದಸ್ಯರಿಗೆ ಪುಸ್ತಕ ನಿರ್ವಹಣೆ ಮತ್ತು ಸಂಘದ ಅಭಿವೃದ್ಧಿ ಕುರಿತಾಗಿ ಕೌಶಲ್ಯ ಅಭಿವೃದ್ಧಿ ತರಬೇತಿ ಒದಗಿಸಲಾಗಿದೆ.

ಒಕ್ಕೂಟ ಸಭೆಗಳು ಮತ್ತು ತರಬೇತಿಯ ನಂತರ ಸ್ವ–ಸಹಾಯ ಗುಂಪುಗಳಲ್ಲಿ ಉಳಿತಾಯ ಮತ್ತು ಹಾಜರಾತಿ ಸುಧಾರಿಸಿದೆ. ಸ್ವ–ಸಹಾಯ ಸಂಘದ ಸದಸ್ಯರು ಪುನರಾವರ್ತಿತ ಠೇವಣಿಗಳ ಯೋಜನೆಯಡಿಯಲ್ಲಿ ನಮ್ಮ ಸಹಕಾರಿ ಮತ್ತು ಬ್ಯಾಂಕ್‌ಗಳ ಮುಖಾಂತರ ತಮ್ಮ ಆದಾಯವನ್ನು ಉಳಿತಾಯ ಮಾಡಲು ಪ್ರಾರಂಭಿಸಿದ್ದಾರೆ. 1565 ಸ್ವ–ಸಹಾಯ ಸಂಘಗಳು ಒಕ್ಕೂಟವನ್ನು ಸೇರಲು ಆಸಕ್ತಿ ವಹಿಸಿವೆ ಮತ್ತು ಆವರ್ತಕ ಒಕ್ಕೂಟ ಸಭೆಗಳಲ್ಲಿ ಭಾಗವಹಿಸಿವೆ. ದೇವರಾಜ ಅರಸು ಯೋಜನೆಯ ಸಬ್ಸಿಡಿ ಸೌಲಭ್ಯ ಮತ್ತು ಪಿಂಚಣಿ ಸೌಲಭ್ಯದ ಬಗ್ಗೆ ಜಾಗೃತಿ ಮೂಡಿಸಲಾಗಿದೆ.



ಈಡಲ್‌ಗೀವ್ ಫೌಂಡೇಶನ್ ಬೆಂಬಲಕ್ಕೂ ಮೊದಲು ಮನುವಿಕಾಸವು ಕೆಲ ಗ್ರಾಮಗಳಲ್ಲಿನ ಸೀಮಿತ ಸಂಪನ್ಮೂಲ ಮತ್ತು ಸಾಮರ್ಥ್ಯದೊಂದಿಗೆ ಸ್ವ–ಸಹಾಯ ಸಂಘಗಳ ರಚನೆ ಹಾಗೂ ಆರ್ಥಿಕ ಸೇರ್ಪಡೆಗಳ ಮೂಲಕ ಬಡ ಮಹಿಳೆಯರ ಜೀವನೋಪಾಯಗಳ ಅಭಿವೃದ್ಧಿ, ನೀರಿನ ಸಂರಕ್ಷಣೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯನ್ನು ನಿರ್ವಹಿಸುತ್ತಿತ್ತು. ಈಡಲ್‌ಗೀವ್ ಫೌಂಡೇಶನ್ ಬೆಂಬಲದೊಂದಿಗೆ ಮನುವಿಕಾಸವು ಸ್ವ–ಸಹಾಯ ಸಂಘ ಮತ್ತು ಜಂಟಿ ಹೊಣೆಗಾರಿಕೆ ಗುಂಪುಗಳಿಗೆ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ಪಡೆಯುವ ಮಾರ್ಗಗಳ ಕುರಿತು ತಿಳಿವಳಿಕೆ ನೀಡುತ್ತಿದೆ.

ಬ್ಯಾಂಕ್‌ಗಳು ಅಥವಾ ಸ್ವ–ಸಹಾಯ ಸಂಘಗಳ ಆಂತರಿಕ ಸಾಲ ಮತ್ತು ಇತರ ಹಣಕಾಸು ಸಂಸ್ಥೆಗಳ ಮುಖಾಂತರ 20,000ಕ್ಕೂ ಅಧಿಕ ಮಹಿಳೆಯರಿಗೆ ಸಾಲ ಸೌಲಭ್ಯ ಒದಗಿಸಲಾಗಿದೆ. ಅಂದಾಜು ಶೇ.10ರಷ್ಟು ಸ್ವ–ಸಹಾಯ ಸಂಘಗಳು ಭಾರತ ಸರಕಾರ ಬೆಂಬಲಿತ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದಲ್ಲಿ

ಭಾಗಿಯಾಗಿವೆ. ಒಕ್ಕೂಟಗಳ ಅಡಿಯಲ್ಲಿ ಎಲ್ಲ ಬಡ ಮಹಿಳೆಯನ್ನು ಒಂದುಗೂಡಿಸಲಾಗುತ್ತಿದೆ ಮತ್ತು 25 ಒಕ್ಕೂಟಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. ಇದರಿಂದಾಗಿ ಮಹಿಳೆಯರಿಗೆ ತಮ್ಮ ಸವಾಲುಗಳನ್ನು ಎದುರಿಸಲು ಮತ್ತು ತಮಗಿರುವ ಅವಕಾಶಗಳನ್ನು ಪರಸ್ಪರ ವಿನಿಮಯಮಾಡಿಕೊಳ್ಳಲು ಅವಕಾಶವಾಗಿದ್ದು ಸಾಮಾಜಿಕವಾಗಿ ತಮ್ಮ ಮೇಲಾಗುವ ಗರಿಷ್ಠ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತಾಗಿದೆ. ವಲಸೆ ಹೋಗುವದು ಕಡಿಮೆಯಾಗಿದ್ದು, ಶಾಲೆಯನ್ನು ಅರ್ಧಕ್ಕೆ ಬಿಡುವವರು ಪ್ರಮಾಣ ಕಡಿಮೆಯಾಗಿದೆ. ಮಹಿಳೆಯರ ಸಾಮೂಹಿಕ ಪ್ರಯತ್ನದಿಂದಾಗಿ ಹಲವು ಗ್ರಾಮಗಳಲ್ಲಿ ಸಾರಾಯಿ ಅಂಗಡಿಗಳು ಮುಚ್ಚಿವೆ. ಮಹಿಳೆಯರಿಗೆ ಜನಧನ್ ಖಾತೆಗಳನ್ನು  ತೆರೆಯಲು ಪ್ರೋತ್ಸಾಹ ನೀಡಲಾಗುತ್ತಿದ್ದು ಸರಕಾರದ ಪ್ರಾಯೋಜಿತ ವಿಮೆಯ ಬಗೆಗೂ ಮಾಹಿತಿ ನೀಡಲಾಗಿದೆ. ಮನುವಿಕಾಸದ ನೆರವಿನಿಂದಾಗಿ  ಪ್ರತಿ ಬ್ಲಾಕ್ ನಲ್ಲಿ 2000 ಕ್ಕೂ ಹೆಚ್ಚಿನ ಮಹಿಳೆಯರು ಜನಧನ್ ಖಾತೆಯನ್ನು ಹೊಂದಿದ್ದು ರಾಷ್ಟ್ರವ್ಯಾಪಿ ಲಾಕ್‌ಡೌನ್ ಸಮಯದಲ್ಲಿ  ಮೂರು ತಿಂಗಳುಗಳ ಕಾಲ ಪರಿಹಾರ ನಿಧಿ  ಮಾಸಿಕ 500 ರೂ ಪಡೆದಿರುತ್ತಾರೆ.

ಮನುವಿಕಾಸವು ಪ್ರಗತಿಮಿತ್ರ ಸೌಹಾರ್ದ ಸರಕಾರಿಯನ್ನು ಸ್ಥಾಪಿಸಿದೆ ಮತ್ತು ಅದರಲ್ಲಿನ 95 ಪ್ರತಿಶತ ಶೇರು ಸದಸ್ಯರುಗಳು ಸ್ವ ಸಹಾಯ ಸಂಘಗಳಲ್ಲಿ ಇರುವವರಾಗಿದ್ದಾರೆ. ಪ್ರಗತಿಮಿತ್ರವು ಈಗಾಗಲೇ 3000 ಸದಸ್ಯರನ್ನು ಹೊಂದಿದೆ ಮತ್ತು ಸದಸ್ಯರಿಗೆ ಸಾಲ ಸೌಲಭ್ಯ ಮತ್ತು ಹೂಡಿಕೆಯನ್ನು ಒದಗಿಸುತ್ತದೆ. ಸಾಲದ ಸ್ವರೂಪದ ಆಧಾರದ ಮೇಲೆ ಬಡ್ಡಿಯನ್ನು ವಿತರಿಸಲಾಗುತ್ತದೆ ಸ್ವ-ಸಹಾಯ ಸಂಘಗಳು ಭದ್ರತೆಯನ್ನು ನೀಡಿದಲ್ಲಿ ಬಡ್ಡಿಯ ದರದಲ್ಲೂ ಕಡಿಮೆ ಮಾಡುತ್ತದೆ. ಮತ್ತು ಉಳಿತಾಯದ ಠೇವಿನ ಮೇಲೆ 8.5 ಪ್ರತಿಶತ ಬಡ್ಡಿದರವನ್ನು ಸ್ವ ಸಹಾಯ ಸಂಘಗಳಿಗೆ ನೀಡಲಾಗುತ್ತದೆ. ಸಹಕಾರಿ ವ್ಯವಹಾರವು ರೂ.2 ಕೋಟಿಗೂ ಅಧಿಕವಾಗಿದೆ ದಿನಸಿ ಮತ್ತು ಎರವಲು(ಸಾಲ)ಗಾಗಿ ರೂ.60 ಲಕ್ಷ ಸಾಲವನ್ನು ಮಂಜೂರು ಮಾಡಿದೆ. ಲಾಕ್‌ಡೌನ್ ಸಮಯದಲ್ಲಿ ಬಡ ಮಹಿಳೆಯರಿಗೆ ಸೇವೆ ಸಲ್ಲಿಸುವುದಕ್ಕಾಗಿ ವ್ಯವಹಾರ ಮಾದರಿಯನ್ನು ರೂಪಿಸಿದೆ. ದೂರದ ಹಳ್ಳಿಯವರು ಕಡಿಮೆ ಗುಣಮಟ್ಟದ ದಿನಸಿಗಳನ್ನು ಹೆಚ್ಚಿನ ಬೆಲೆಗೆ ಖರೀದಿಸುವಂತಾಗಿತ್ತು, ಸ್ವ-ಸಹಾಯ ಸಂಘಗಳ ಮಹಿಳಾ ಉದ್ಯಮಿಗಳು ನಡೆಸುವ ಸಹಕಾರಿ ಕಿರಾಣಿ ಅಂಗಡಿಗಳು ಗುಣಮಟ್ಟದ ದಿನಸಿಗಳನ್ನು ಕೈಗೆಟಕುವ ದರದಲ್ಲಿ ನೀಡುತ್ತಿವೆ.





ಮನುವಿಕಾಸವು ಸ್ವ ಸಹಾಯ ಸಂಘಗಳು ಮತ್ತು ಒಕ್ಕೂಟಗಳೊಂದಿಗೆ ಮಹಿಳೆಯರಿಗಾಗಿ ಉತ್ಪಾದಕ ಸಂಘ ಉತ್ತೇಜಿಸುತ್ತಿದೆ. ಅಸ್ತಿತ್ವದಲ್ಲಿರುವ ರೈತಉತ್ಪಾದಕ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಸಂಸ್ಕರಿಸಲು ಸ್ವ-ಸಹಾಯ ಸಂಘಗಳ ಮಹಿಳೆಯರನ್ನು ಸಂಪರ್ಕಿಸುತ್ತಿವೆ. ಸುಮಾರು 200 ಸ್ವ-ಸಹಾಯ ಸಂಘಗಳ ಮಹಿಳೆಯರು ಪ್ರಗತಿ ಮಿತ್ರರೈತ ಉತ್ಪಾದಕ ಕಂಪನಿಗಳೊಂದಿಗೆ ಸಂಪರ್ಕ ಹೊಂದಿದ್ದು, ಅಡಿಕೆ ಬೆಳೆ ಮತ್ತು ಅಡಿಕೆ ಹಾಳೆಯ ತಟ್ಟೆ ತಯಾರಿಕೆ ಮತ್ತು ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿ ಅಧಿಕ ಗಳಿಕೆಗೆ ನೆರವಾಗುತ್ತಿದೆ. ಈಡಲ್‌ಗೀವ್ ಫೌಂಡೇಶನ್ ಬೆಂಬಲದೊಂದಿಗೆ, 3200 ಸದಸ್ಯರು ವಿವಿಧ ಆದಾಯ ಗಳಿಸುವ ಚಟುವಟಿಕೆಗಳಲ್ಲಿ ಸಮರ್ಥರಾಗಿದ್ದಾರೆ ಮತ್ತು ಇವರು ದಿನಕ್ಕೆ ರೂ. 500 ಗಳಿಸುತ್ತಿದ್ದಾರೆ. ಇವರಿಗೆ ಉದ್ಯಮ, ವೃತಿಪರ ಕೌಶಲ್ಯ, ಸಾಲ ಸೌಲಭ್ಯ ಮತ್ತು ಮಾರುಕಟ್ಟೆ ಚಟುವಟಿಕೆ ಬೆಂಬಲ, ಜತೆಗೆ ವಿಶೇಷ ಸಂದರ್ಭಗಳಲ್ಲಿ ಅವಶ್ಯ ಸಾಮಾಗ್ರಿಗಳನ್ನು ಪೂರೈಸಲಾಗುತ್ತದೆ.

ಉತ್ತರ ಕನ್ನಡದ ಕರಾವಳಿ ಭಾಗಗಳಲ್ಲಿ ತರಕಾರಿ ಬೆಳೆಯುವ ಮಹಿಳೆಯರನ್ನು ಏಕತ್ರೀಕರಣ ಮಾಡಿ ಅವರ ಉತ್ಪಾದನೆಗಳನ್ನು ಮಾರಾಟ ಮಾಡಲು ಬೆಂಬಲ ಮತ್ತು ಪ್ರೋತ್ಸಾಹ ನೀಡಲಾಗುತ್ತಿದೆ. ಉತ್ತಮ ಮಾರಾಟದರ ಪಡೆಯಲು ಮತ್ತು ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಲು, ಉತ್ಪನ್ನಗಳನ್ನು ಮಾರುಕಟ್ಟೆಗೆ ತಲುಪಿಸುವುದಕ್ಕಾಗಿ ಬೊಲೆರೋ ಪಿಕ್‌ಅಪ್ ಗೂಡ್ಸ್ ವಾಹನವನ್ನು ಖರೀದಿಸಲಾಗಿದೆ. ತರಕಾರಿ ಬೆಳೆಯುವ ಮಹಿಳೆಯರನ್ನು ರೈತ ಉತ್ಪಾದಕ ಸಂಘದ ಅಡಿಯಲ್ಲಿ ಸಾಂಸ್ಥಿಕರಣಗೊಳಿಸಲಾಗಿದೆ. ಹೊಸದಾಗಿ ಸ್ಥಾಪಿಸಲಾದ ರೈತ ಉತ್ಪಾದಕ ಸಂಘಕ್ಕಾಗಿ ವ್ಯಾಪಾರ ಯೋಜನೆ ಮತ್ತು ಅಭಿವೃದ್ಧಿ ಬೆಂಬಲ ನೀಡಲಾಗುತ್ತಿದೆ.

ಮೀನುಗಾರ ಮಹಿಳೆಯರಿಗೆ ಉತ್ಪಾದಕ ಸಂಘಟನೆಯನ್ನು ಸ್ಥಾಪಿಸಲಾಗಿದೆ ಮತ್ತು ಸದಸ್ಯರ ವ್ಯವಹಾರ ಯೋಜನೆ, ಸಿದ್ಧತೆ ಹಾಗೂ ಸಾಮರ್ಥ್ಯ ವೃದ್ಧಿ ಪ್ರಗತಿಯಲ್ಲಿದೆ. ಭವಿಷ್ಯದಲ್ಲಿ ಈಡಲ್‌ಗೀವ್ ಫೌಂಡೇಶನ್ ಬೆಂಬಲದಲ್ಲಿ ಸುತ್ತಲಿನ ಇತರ ಜಿಲ್ಲೆಗಳಲ್ಲಿ ಹೊಸ ಬಗೆಯ ಮತ್ತು ಪರಿಣಾಮಕಾರಿ ಚಟುವಟಿಕೆಗಳನ್ನು ಕೈಗೊಳ್ಳಲು ಇಚ್ಛಿಸಿದ್ದೇವೆ.

ಮಾನವ ಸಂಪನ್ಮೂಲ ನಿರ್ವಹಣೆ, ಆಯವ್ಯಯ ಖಾತೆಗಳು ಮತ್ತು ಹಣಕಾಸಿನ ನಿರ್ವಹಣೆ, ಸಾಮಾಜಿಕ ಮಾಧ್ಯಮ, ದಾನಿಗಳ ನಿರ್ವಹಣೆ ಮತ್ತು ವರದಿ ತಯಾರಿಕೆ ಇತ್ಯಾದಿಗಳ ನೀತಿಗಳನ್ನು ಹಾಗೂ ಕಾರ್ಯಶೈಲಿಗಳನ್ನು ಸುಧಾರಿಸುವ ಬಗ್ಗೆ ಈಡಲ್‌ಗೀವ್ ಫೌಂಡೇಶನ್ ಬೆಂಬಲ ನೀಡಿದೆ. ಇದರಿಂದಾಗಿ ಜಾಲತಾಣದ ಅಭಿವೃದ್ಧಿ, ದಾನಿಗಳ ನಿರ್ವಹಣೆ, ಕ್ರೌಡ್ ಫಂಡ್ ಮೊಬಲೈಸೇಶನ್, ಸಿಬ್ಬಂದಿಗಳ ಆಯ್ಕೆಯ ಮಾನದಂಡ ಮತ್ತು ಸಿಬ್ಬಂದಿಗಳ ಸಾಮರ್ಥ್ಯ ಉತ್ತಮಗೊಳಿಸಲು ಸಾಧ್ಯವಾಗಿದೆ.

## ಪ್ರತಿಭಾವಂತರಿಗೆ ಪುರಸ್ಕಾರ

ಸಂಸ್ಥೆಯು ಕೇವಲ ಮಹಿಳೆಯರಿಗೆ ಅಷ್ಟೇ ಅಲ್ಲದೆ ಪ್ರತಿಭಾವಂತ ಮಕ್ಕಳಿಗೆ ಶೈಕ್ಷಣಿಕವಾಗಿಯೂ ಪ್ರೇರೇಪಿಸಿದೆ ಉತ್ತಮ ಅಂಕಗಳನ್ನು ಪಡೆದ ಹಾಗೂ ಬಡ ವಿದ್ಯಾರ್ಥಿಗಳಿಗೆ ವಿಧ್ಯಾರ್ಥಿ ವೇತನ ನೀಡಿ, ಆನ್‌ಲೈನ್‌ತರಗತಿಗೆ ಸಹಾಯವಾಗಲೆಂದು ಆಯ್ದ ಬಡ ವಿದ್ಯಾರ್ಥಿಗಳಿಗೆ ಅಂಡ್ರ್ಯಾಯ್ಡ್ ಮೊಬೈಲ್‌ಗಳನ್ನು ನೀಡಿ ಸಹಾಯ ಮಾಡಿದೆ, ಅಲ್ಲದೇ ಮನುವಿಕಾಸ ಸಂಸ್ಥೆ ಈಗಾಗಲೇ 2000ಕ್ಕೂ ಹೆಚ್ಚು ಮಕ್ಕಳಿಗೆ ಕಲಿಕೋಪಕರಣ ಮತ್ತು ನಿತ್ಯಉಪಯೋಗಿ ವಸ್ತುಗಳನ್ನು ವಿತರಿಸಿದೆ.

**ಒಟ್ಟಾರೆಯಾಗಿ ಸಾಧಿಸಲಾದ ಅಂಕಿ ಅಂಶಗಳು**

- 102 ಸದಸ್ಯರಿಗೆ ಸ್ವ–ಸಹಾಯ ಗುಂಪು ಮತ್ತು ಜಂಟಿ ಹೊಣೆಗಾರಿಕೆ ಗುಂಪುಗಳಿಗೆ 10 ಬ್ಲಾಕ್‌ಗಳಲ್ಲಿ ಯೋಜನೆಯ ಅಭಿಶಿಕ್ಷಣ ಕಾರ್ಯಕ್ರಮ ಮಾಡಲಾಗಿದೆ
- 314 ಒಕ್ಕೂಟದ ಸಭೆಗಳನ್ನು ಮಾಡಲಾಗಿದೆ ಈ ಸಭೆಗಳಲ್ಲಿ 10839 ಸದಸ್ಯರು ಬಾಗವಹಿಸಿದ್ದು ಯೋಜನೆಯ ಮಹತ್ವವನ್ನುಅರಿತಿದ್ದಾರೆ.
- 162 ಕ್ಕೂ ಹೆಚ್ಚಿನ ಹಳ್ಳಿಗಳನ್ನು ಸ್ವ–ಸಹಾಯ ಸಂಘಗಳು ಮತ್ತು ಒಕ್ಕೂಟದ ಸಭೆಗಳಿಂದ ತಲುಪಲಾಗಿದೆ.
- ಈ ಮೊದಲು ಸ್ವ–ಸಹಾಯ ಸಂಘಗಳಿಗೆ ಆರ್ಥಿಕ ಸಾಲ ವಸೂಲಾತಿಗಷ್ಟೇ ಸೀಮಿತವಾಗಿದ್ದ ಯೋಜನೆ ಈಗ ಉಳಿತಾಯದ ಜಾಗೃತಿ, ಬ್ಯಾಂಕಿನ ವ್ಯವಹಾರಗಳು, ನಗದು ರಹಿತ ವ್ಯವಹಾರಗಳು, ಪಿಂಚಣಿ ವ್ಯವಸ್ಥೆ, ಮತ್ತು ಜೀವ ವಿಮೆ ಬಗೆಗೆ ಜಾಗೃತಿ ಮೂಡಿಸುವಲ್ಲಿ ಮಗ್ನವಾಗಿದೆ.
- ಗ್ರಾಮೀಣ ಮಟ್ಟದಲ್ಲಿ ವಾಸಿಸುವ ಮಹಿಳೆಯರಿಗಾಗಿ ಸರಕಾರದ ಯೋಜನೆಗಳನ್ನು ಅವರಿಗೆ ತಲುಪಿಸಲು ಸ್ವ ಸಹಾಯ ಸಂಘಗಳ ಒಕ್ಕೂಟ ಸಭೆಗಳಿಗೆ ಬ್ಲಾಕ್ ವಲಯ ಮಟ್ಟದ ಅಧಿಕಾರಿಗಳನ್ನು ಆಹ್ವಾನಿಸಿ ಸರಕಾರದ ವಿವಿಧ ಯೋಜನೆಯನ್ನು ಅವರಿಗೆ ತಿಳಿಸುವ ವ್ಯವಸ್ಥೆಯನ್ನು ಮನುವಿಕಾಸ ಮಾಡುತ್ತಿದೆ.
- 480 ಸ್ವ–ಸಹಾಯ ಸಂಘಗಳನ್ನು ಮತ್ತು 128 ಜಂಟಿ ಹೊಣೆಗಾರಿಕೆ ಗುಂಪು (ಜೆಎಲ್‌ಜಿ) ಗಳಿಗೆ ನೇರವಾಗಿ ಬ್ಯಾಂಕ್‌ನಿಂದ ಸಾಲವನ್ನು ಕೊಡಿಸಿದ್ದು ಅತಿ ಕಡಿಮೆ ಬಡ್ಡಿಯನ್ನು ವಿಧಿಸಲಾಗಿದೆ.
- ಪ್ರಗತಿಮಿತ್ರ ಸೌಹಾರ್ದ ಸಹಕಾರಿ ಸೊಸೈಟಿಯಿಂದ ಸ್ವ–ಸಹಾಯ ಗುಂಪುಗಳಿಗೆ ಸಾಲವನ್ನು ನೀಡಲಾಗಿದೆ ಮತ್ತು ವರ್ಷದಿಂದ ವರ್ಷಕ್ಕೆ ಇದು ಚೇತರಿಕೆಯನ್ನು ಕಂಡಿದೆ
- ಇದರಿಂದ 4.75 ಲಕ್ಷದಷ್ಟು ಹಣ ಕಡ್ಡಾಯ ಠೇವಿನಿಂದ, ಮರುಪಾವತಿ ಠೇವಣಿಯಿಂದ ಮತ್ತು ಪಿಗ್ಮಿಯಿಂದ ಬಂದಿದೆ.
- ಡೇರಿ ಅಭಿವೃದ್ಧಿ ತರಬೇತಿಯನ್ನು 375 ಸದಸ್ಯರಿಗೆ ನೀಡಲಾಗಿದೆ.
- 283 ಸದಸ್ಯರಿಗೆ ಕಂಪ್ಯೂಟರ್ ಸಾಕ್ಷರತಾ ತರಬೇತಿಯನ್ನು ನೀಡಲಾಗಿದೆ.
- ಈ ಯೋಜನೆಯಿಂದ ಒಟ್ಟೂ 3399 ಸದಸ್ಯರುಗಳು ನೇರವಾಗಿ ಬ್ಯಾಂಕಿನಿಂದ ಸಾಲ ಪಡೆದಿರುತ್ತಾರೆ
- ಪ್ರಗತಿಮಿತ್ರ ಸೌಹಾರ್ದ ಸಹಕಾರಿಯಿಂದ ಒಟ್ಟೂ 26 ಸ್ವ–ಸಹಾಯ ಗುಂಪುಗಳ 66.50 ಲಕ್ಷ ಸಾಲವನ್ನು ಪಡೆದಿವೆ (ಇದು ಮನುವಿಕಾಸ ಸಂಸ್ಥೆಯಿಂದ ಪ್ರಸ್ತುತ ಪಡಿಸಲಾಗಿದೆ.)
- ಈ ನವ ಯೋಜನೆಯ ಅನುಷ್ಠಾನದಿಂದಾಗಿ ಮೀನುಗಾರ ಮಹಿಳಾ ಗುಂಪುಗಳು ಶೂನ್ಯ ಬಡ್ಡಿ ದರದಲ್ಲಿ ಸಾಲವನ್ನು ಪಡೆಯುತ್ತಿವೆ.
- ಈ ಯೋಜನೆಯಲ್ಲಿ 22 ತಂಡಗಳ 988 ಸದಸ್ಯರಿಗೆ ಉದ್ಯಮಶೀಲತೆ ಅಭಿವೃದ್ಧಿ ತರಬೇತಿಯನ್ನು ನೀಡಲಾಗಿದೆ.



- 2020–21ರಲ್ಲಿ ಸ್ವ–ಸಹಾಯ ಸಂಘಗಳಿಂದ ರೂ. 1.854 ಲಕ್ಷಗಳ ಸೇವಾ ಶುಲ್ಕವನ್ನು ಸಂಗ್ರಹಿಸಲಾಗಿದೆ.
- ಹೆಚ್ಚಿನ ಕೌಶಲ್ಯ ತರಬೇತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳಿಂದ ರೂ.300 ರಿಂದ 500ಗಳವರೆಗೆ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ.
- 371 ಸದಸ್ಯರಿಗೆ ಹೊಲಿಗೆ ತರಬೇತಿ ನೀಡಲಾಗಿದೆ. ಈ ಸದಸ್ಯರಿಂದ ಮುಖಗವಸುಗಳನ್ನು ಮತ್ತು ತಯಾರಿಸಿ, ಅವನ್ನು ಮಾರಾಟ ಮಾಡಲಾಗುತ್ತಿದೆ. ಈ ಮೂಲಕ ಅವರಿಗೆ ಉದ್ಯೋಗವನ್ನು ನೀಡಲಾಗಿದೆ.
- 300 ಸದಸ್ಯರಿಗೆ ನರ್ಸರಿ ಟ್ರೇ ನೀಡಲಾಗಿದೆ.
- 244 ಮೀನುಗಾರರಿಗೆ ಮೀನು ಸಂಗ್ರಹಣಾ ಪೆಟ್ಟಿಗೆಗಳನ್ನು ವಿತರಿಸಲಾಗಿದೆ.
- 81 ಮಹಿಳಾ ಸದಸ್ಯರಿಗೆ 2000 ಕೋಳಿಮರಿಗಳನ್ನು ವಿತರಿಸಲಾಗಿದೆ.

**ಒಂದು ಸಮಯದ ಅನುದಾನ ಹಲವು ಚಟುವಟಿಕೆಗಳಿಗೆ ವರದಾನ**

ಕೊರೋನಾ ಸಾಂಕ್ರಾಮಿಕ ರೋಗದಿಂದಾಗಿ ದೇಶದಲ್ಲಿ ಲಾಕ್‌ಡೌನ್ ಮಾಡಿದಾಗ ಮತ್ತು ಆನಂತರದ ದಿನಗಳಲ್ಲಿ ದಿನಗೂಲಿ ಕಾರ್ಮಿಕರು ಜೀವನೋಪಾಯಕ್ಕಾಗಿ ತೊಂದರೆ ಪಡುವಂತಾಯಿತು. ಇವರು ಸಾಮಾನ್ಯವಾಗಿ ತಮ್ಮ ವೇತನವನ್ನು ಮುಂಗಡವಾಗಿ ಪಡೆದುಕೊಳ್ಳುತ್ತಾರೆ. ಆ ಹಣದಿಂದ ತಮ್ಮ ಊರುಗಳಲ್ಲಿ ಪಡೆದ ಸಾಲವನ್ನು ಮರುಪಾವತಿಸುತ್ತಾರೆ. ಇವರು 4–5 ದಿನಗಳ ಖರ್ಚಿಗೆ ಬೇಕಾಗುವ ಹಣವನ್ನಷ್ಟೇ ಹೊಂದಿರುತ್ತಾರೆ. ಲಾಕ್‌ಡೌನ್ ಮತ್ತು ಆನಂತರದ ಸಮಯದಲ್ಲಿ ಇವರಿಗೆ ಸಾಲ ಪಡೆಯುವ ಮೂಲಗಳು ಇಲ್ಲವಾಗಿ, ಮನೆಯಲ್ಲಿನ ಚಿನ್ನದ ಆಭರಣಗಳನ್ನು ಮಾರಿದ್ದಾರೆ. ಇವರಿಗೆ ಕೈ ಸಾಲ ಕೂಡ ದೊರೆಯದಂತಾಗಿದೆ.

ಲಾಕ್‌ಡೌನ್ ನಂತರದ ದಿನಗಳಲ್ಲಿ ಕೆಲ ಸಣ್ಣ ಉದ್ಯಮಿಗಳು, ದಿನಗೂಲಿ ಕಾರ್ಮಿಕರು, ಅದರಲ್ಲೂ ವಿಶೇಷವಾಗಿ ಮಹಿಳೆಯರು ಸಾಲ ಮರುಪಾವತಿಸಲು, ಮನೆ ಖರ್ಚು–ವೆಚ್ಚ ನಿಭಾಯಿಸಲು ಮತ್ತು ಮಕ್ಕಳ ಶಿಕ್ಷಣದ ವೆಚ್ಚ ನಿಭಾಯಿಸಲು ಕಷ್ಟಪಡುತ್ತಿದ್ದರು. **'ಮನುವಿಕಾಸ'ವು 'ಈಡಲ್‌ಗೀವ್ ಫೌಂಡೇಶನ್'** ಬೆಂಬಲದೊಂದಿಗೆ ದುರ್ಬಲ ಸಮುದಾಯ ಮತ್ತು ಕೋವಿಡ್–19 ಬಾಧಿತ ಕುಟುಂಬಗಳಿಗೆ ಮಾನವೀಯ ಬೆಂಬಲ ನೀಡಿದೆ. ತಕ್ಷಣದ ಪರಿಹಾರ ನೀಡುವುದರ ಜೊತೆಗೆ ಮೀನು ಸಂರಕ್ಷಕ ಪೆಟ್ಟಿಗೆ, ಪಡಿತರ ಕಿಟ್, ಜೀವನೋಪಾಯಕ್ಕಾಗಿ ಹೊಲಿಗೆ ಯಂತ್ರ ಇತ್ಯಾದಿಗಳನ್ನು ಒದಗಿಸಲಾಗಿದೆ.

**ಶಿಕ್ಷಣ ಮತ್ತು ಔದ್ಯೋಗಿಕ ಬೆಂಬಲ**

'ಮನುವಿಕಾಸ'ವು 44 ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಿದೆ. ವಿಶೇಷವಾಗಿ ಆಟೋ ಚಾಲಕರು ಮತ್ತು ಶಿಕ್ಷಣಕ್ಕಾಗಿ ಹಣಕಾಸಿನ ಅಗತ್ಯವಿರುವ ಸ್ವ–ಸಹಾಯ ಸಂಘದ ಸದಸ್ಯರ ಮಕ್ಕಳಿಗೆ ಆರ್ಥಿಕ ಸಹಾಯ ಮಾಡಲಾಗಿದೆ. ಸಿರ್ಸಿ, ಸಿದ್ದಾಪುರ, ಮುಂಡಗೋಡು, ಅಂಕೋಲಾಗಳಲ್ಲಿ ಫಲಾನುಭವಿಗಳಿದ್ದಾರೆ. ಬಡ ವಿದ್ಯಾರ್ಥಿಗಳು ಶಾಲಾ ಶಿಕ್ಷಣದಿಂದ ವಂಚಿತರಾಗದೇ ಹೆಚ್ಚಿನ ವಿದ್ಯಾಭ್ಯಾಸ ಪಡೆಯಲಿ ಎಂಬ ಉದ್ದೇಶದಿಂದ ಈ ಬೆಂಬಲವನ್ನು ನೀಡಲಾಗುತ್ತಿದೆ.

**ಮನುವಿಕಾಸದಿಂದ ಮೀನುಗಾರ ಮಹಿಳೆಯರು ಮತ್ತು ತರಕಾರಿ ಬೆಳೆಯುವ ಸಣ್ಣ ರೈತರಿಗೆ ಬೆಂಬಲ**



ಹಳ್ಳಿಗಳಲ್ಲಿನ ನಿರುದ್ಯೋಗಿ ಕಾರ್ಮಿಕರಿಗೆ 'ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ' ಅಡಿಯಲ್ಲಿ ಸಮುದಾಯದ ಸದಸ್ಯರು ತಮ್ಮ ದೈನಂದಿನ ವೇತನ ಪಡೆಯಲು ಅನುಕೂಲ ಮಾಡಿಕೊಡಲಾಗಿದೆ. ನಂತರದಲ್ಲಿ ಯೋಜನೆಯನ್ನು 'ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯೋಜನೆ' ಅಥವಾ 'ಎಂಜಿಎನ್‌ಆರ್‌ಇಜಿಎ' ಎಂದು ಮರುನಾಮಕರಣ ಮಾಡಲಾಗಿದೆ. ಇದು ಭಾರತೀಯ ಕಾರ್ಮಿಕರ ಕಾನೂನು ಮತ್ತು ಸಾಮಾಜಿಕ ಭದ್ರತೆಗೆ ಕೈಗೊಂಡಿದ್ದು, ಕೆಲಸದ ಹಕ್ಕನ್ನು ಖಾತ್ರಿಪಡಿಸುವ ಗುರಿ ಹೊಂದಿದೆ. **'ಮನುವಿಕಾಸ'**ವು ಈ ಯೋಜನೆಯ ಕುರಿತಾದ ಸಮರ್ಪಕ ಮಾಹಿತಿ ಮತ್ತು ಪ್ರಯೋಜನಗಳನ್ನು ಕಾರ್ಮಿಕರಿಗೆ ನೀಡುವಲ್ಲಿ ಉತ್ತಮ ಪ್ರಯತ್ನ ನಡೆಸಿದೆ. ಈ ಯೋಜನೆಯ ಅಡಿಯಲ್ಲಿ ಪ್ರತಿ ಕಾರ್ಮಿಕನು ರೂ. 285 ಕೂಲಿ ಪಡೆಯುತ್ತಾನೆ ಮತ್ತು ಇವರು ಗ್ರಾಮ ಅಭಿವೃದ್ಧಿ ಅಥವಾ ಅವರ ವೈಯಕ್ತಿಕ ಮೂಲಸೌಕರ್ಯಗಳಿಗೂ ಕೆಲಸ ನಿರ್ವಹಿಸಬಹುದಾಗಿದೆ. ಸುಮಾರು 1003 ಸದಸ್ಯರಿಗೆ 52,550 ದಿನದ ಉದ್ಯೋಗಾವಕಾಶ ದೊರಕಿದೆ.

ಎಂಜಿಎನ್‌ಆರ್‌ಇಜಿಎ ಅಡಿಯಲ್ಲಿ ಉದ್ಯೋಗ ಗಳಿಸುವುದು ಮತ್ತು ಜಾಬ್‌ಕಾರ್ಡ್ ಪಡೆಯುವುದು ಸಾಮಾನ್ಯ ಕಾರ್ಮಿಕರಿಗೆ ಸುಲಭವಲ್ಲ. ಅವರು ಕೆಲಸ ಮಾಡುವ ಕಾರ್ಮಿಕರ ಗುಂಪಿನಲ್ಲಿ ಸೇರಬೇಕು ಮತ್ತು ತನ್ನ ಬ್ಯಾಂಕ್ ಖಾತೆಯ ವಿವರಗಳನ್ನು ಜಾಬ್‌ಕಾರ್ಡ್‌ಗಾಗಿ ಕೆವೈಸಿ ವಿವರಗಳ ಜತೆಗೆ ಲಿಂಕ್ ಮಾಡಬೇಕು. ಕೆಲ ಮಧ್ಯವರ್ತಿಗಳು ಕಾರ್ಮಿಕರ ಕೆಲಸಗಳಲ್ಲಿ ಭಾಗಿಯಾಗುವುದು ಮತ್ತು ಅವರ ಕೆಲಸದ ಪ್ರಮಾಣದ ಪ್ರಕ್ರಿಯೆಯಲ್ಲಿ ಮೋಸ ಮಾಡುತ್ತಾರೆ.

ಸರ್ಕಾರವು ಕೇವಲ ಉದ್ಯೋಗವನ್ನು ಮಾತ್ರ ಒದಗಿಸುತ್ತದೆ. ಕಾರ್ಮಿಕ ಸಮುದಾಯಕ್ಕೆ ಯಾವುದೇ ಬಗೆಯ ಉಪಕರಣಗಳನ್ನು ಅವರ ಕೆಲಸಗಳಿಗೆ ಒದಗಿಸುವುದಿಲ್ಲ. ಹೆಚ್ಚಿನ ಕಾರ್ಮಿಕ ಸಮುದಾಯದವರು ಎಂಜಿಎನ್‌ಆರ್‌ಜಿಎ ಕಾರ್ಯ ಸ್ಥಳದಲ್ಲಿ ತೀಕ್ಷ್ಣತೆಯ ಕೊರತೆ ಮತ್ತು ಸೂಕ್ತ ಉಪಕರಣಗಳ ಅಭಾವದತೆಗೆ ಅನುಷ್ಠಾನದಲ್ಲಿಕೂಡ ಎಡವುತ್ತಿದ್ದಾರೆ. ಇದನ್ನೆಲ್ಲ ಗುರುತಿಸಿದ **'ಮನುವಿಕಾಸ'**ವು ಕಾರ್ಮಿಕರಿಗೆ ಬುಟ್ಟಿಗಳು, ಹಾರೆ, ಸಲಿಕೆ, ಪಿಕಾಸಿ ಇತ್ಯಾದಿಗಳನ್ನು ನೀಡಿದೆ.

ಲಾಕ್‌ಡೌನ್ ಮತ್ತು ನಂತರದ ಸಮಯದಲ್ಲಿ ಮೀನುಗಾರ ಮಹಿಳೆಯರು ಮತ್ತು ತರಕಾರಿ ಬೆಳೆಗಾರರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಹಾಗೂ ನಂತರ ಉಳಿಯುವ ಉತ್ಪನ್ನಗಳನ್ನು ಸಂರಕ್ಷಿಸುವ ಸಮಸ್ಯೆಯನ್ನು ಎದುರಿಸುತ್ತಿದ್ದರು. ತರಕಾರಿ ಮತ್ತು ಮೀನುಗಳನ್ನು ಸರ್ಕಾರ ಸೂಚಿಸಿದ ಮಾರ್ಗಸೂಚಿಗಳನ್ನು ಅನುಸರಿಸಿ ನಿಗದಿತ ಸಮಯದೊಳಗೆ ಮಾರಾಟ ಮಾಡಬೇಕಿತ್ತು. **'ಮನುವಿಕಾಸ'**ವು ಈ ನಿಟ್ಟಿನಲ್ಲಿ ಮೀನುಗಾರ ಮಹಿಳೆಯರಿಗೆ ನೆರವಾಗಲು 616 ಮೀನು ಸಂಗ್ರಹಣಾ ಪೆಟ್ಟಿಗೆಗಳನ್ನು ನೀಡಿದೆ. ಇದರಿಂದಾಗಿ ಮೀನುಗಳನ್ನು ಹೆಚ್ಚು ಸಮಯ ಸಂಗ್ರಹಿಸಿ ಮಾರಾಟ ಮಾಡಲು ಅವರಿಗೆ ಸಾಧ್ಯವಾಗಿದೆ. ಇದರ ಜತೆಗೆ ತರಕಾರಿ ಬೆಳೆಗಾರರನ್ನು ಬೆಂಬಲಿಸಲು ಪಿಕ್‌ಅಪ್‌ಗೂಡ್ಸ್ ವಾಹನವನ್ನು ಖರೀದಿಸಿ ಸಂಸ್ಥೆಯ ಸದಸ್ಯರು ತರಕಾರಿಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ನೆರವಾಗಿದೆ.

ಯಾವುದೇ ಕೃಷಿ/ತೋಟಗಾರಿಕೆ ಉತ್ಪನ್ನಗಳು ಅವುಗಳ ಕಟಾವಿನ ಸಮಯದಲ್ಲಿ ಆ ನಂತರದಲ್ಲಿ ಅವುಗಳ ನಿರ್ವಹಣೆ ಪ್ರಮುಖ ಅಂಶವಾಗಿದೆ. ಜಿಲ್ಲೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಅಧಿಕವಾಗಿದ್ದು ಕಡಿಮೆ ಪ್ರಮಾಣದ ಕೃಷಿ ಭೂಮಿಯಲ್ಲಿ ಸಣ್ಣ ಪ್ರಮಾಣದಲ್ಲಿ ಉತ್ಪನ್ನಗಳನ್ನು ಬೆಳೆಯುತ್ತಿದ್ದಾರೆ. ಅವರಿಗೆ ದೊರೆಯುವ ಆದಾಯದಲ್ಲಿ ಸ್ವಂತದ ಸಾರಿಗೆ ವ್ಯವಸ್ಥೆ ಹೊಂದಲು ಮತ್ತು ಉತ್ಪನ್ನಗಳ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ಇದಕ್ಕಾಗಿ ಅವರು ಖಾಸಗಿ ಸಾರಿಗೆ ವ್ಯವಸ್ಥೆಯನ್ನು ಅವಲಂಬಿಸಿದ್ದಾರೆ.

ಮತ್ತೊಂದೆಡೆ ಕೊಯ್ಲು ಮಾಡಿದ ಉತ್ಪನ್ನಗಳು ಕೆಡದಂತೆ, ಸರಿಯಾದ ಸಮಯದಲ್ಲಿ ಸಾಗಣೆ ಮಾಡುವುದು ಬಹಳ ಮುಖ್ಯ. ಸಾರಿಗೆ ವಿಳಂಬವಾದರೆ ರೈತರು ಉತ್ಪನ್ನಗಳಲ್ಲಿ ತೂಕದಲ್ಲಿ ನಷ್ಟವನ್ನು ಅನುಭವಿಸಬೇಕಾಗುತ್ತದೆ. ರೈತರ ಈ ಪರಿಸ್ಥಿತಿಯನ್ನು ಖಾಸಗಿಯವರು ಹೆಚ್ಚಾಗಿ ಬಳಸಿಕೊಳ್ಳುತ್ತಾರೆ. ಹೆಚ್ಚಿನ ಸಾರಿಗೆ ಶುಲ್ಕವನ್ನು ವಿಧಿಸುತ್ತಾರೆ. ಇದರಿಂದ ಅಂತಿಮವಾಗಿ ಉತ್ಪಾದನಾ ವೆಚ್ಚ ಅಧಿಕವಾಗಿ ರೈತನಿಗೆ ನಷ್ಟವಾಗುತ್ತದೆ.

ರೈತರ ಉತ್ಪಾದಕ ಸಂಘಗಳ ಉತ್ಪನ್ನಗಳನ್ನು ಮತ್ತು ಸ್ವ-ಸಹಾಯ ಸಂಘಗಳ ಸದಸ್ಯರು ತಯಾರಿಸಿದ ಸರಕುಗಳನ್ನು ಮಾರಲು **'ಮನುವಿಕಾಸ'**ವು ಮಹೀಂದ್ರ ಬೊಲೇರೊ ಗಾಡಿಯನ್ನು ಖರೀದಿಸಿದೆ. **'ಈಡಲ್‌ಗೀವ್ ಫೌಂಡೇಶನ್'** ಬೆಂಬಲದೊಂದಿಗೆ ಮೂರು ಉತ್ಪಾದಕ ಸಂಸ್ಥೆಗಳಿಗೆ ಉತ್ತೇಜನ ನೀಡಿದೆ. ಸಾಮಾನ್ಯ ಸಂಸ್ಕರಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಮತ್ತು ರೈತರು ತಮ್ಮ





ಉತ್ಪನ್ನಗಳನ್ನು ಲಾಭದಾಯಕವಾಗಿ ಮಾರಾಟ ಮಾಡಲು ಮಾರಾಟ ಅಂಗಳವನ್ನು ರಚಿಸಲಾಗಿದೆ. ಆದರೆ, ಹೆಚ್ಚಿನ ಉತ್ಪನ್ನಗಳು ಬೇಗ ಕೆಡುವಂತಹವು ಮತ್ತು ಅವನ್ನು ಸರಿಯಾದ ಸಮಯಕ್ಕೆ ಮಾರಾಟ ಸ್ಥಳ/ಸಂಸ್ಕರಣಾ ಕೇಂದ್ರಗಳಿಗೆ ಸಾಗಿಸುವುದು ಬಹಳ ಮುಖ್ಯ.

ಅಲ್ಪ ಪ್ರಮಾಣದ ಸರಕುಗಳನ್ನು ಹೊಂದಿರುವ ಮತ್ತು ದೂರದ ಹಳ್ಳಿಗಳಲ್ಲಿನ ರೈತರಿಗೆ ಇದು ಸವಾಲಾಗಿದೆ. ಉದಾಹರಣೆಗೆ– ಒಬ್ಬ ರೈತ ಪ್ರತಿದಿನ 2 ಕ್ವಿಂಟಾಲ್ ತರಕಾರಿಯನ್ನು ಕಟಾವು ಮಾಡುವುದು ಮತ್ತು ಅದನ್ನು ವಾಣಿಜ್ಯ ಸಾರಿಗೆಯಲ್ಲಿ ಮಾರುಕಟ್ಟೆಗೆ ಸಾಗಿಸುವುದು ಸುಲಭ ಸಾಧ್ಯವಲ್ಲ. ಇದರಿಂದಾಗಿ ಆತ ತನ್ನ ಉತ್ಪನ್ನಗಳನ್ನು ಸ್ಥಳೀಯವಾಗಿಯೇ ಮಧ್ಯವರ್ತಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾಗುತ್ತದೆ. ಕೋವಿಡ್–19 ರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗಿದೆ.

ಕರ್ನಾಟಕದ ಕರಾವಳಿಯ ಹೆಚ್ಚಿನ ಕುಟುಂಬಗಳಲ್ಲಿ ಪುರುಷರು ಕೃಷಿ ಕೆಲಸಗಳಲ್ಲಿ ತೊಡಗುತ್ತಾರೆ. ವಿಶೇಷವಾಗಿ ಗಿಡಗಳಿಗೆ ನೀರು ಹಾಯಿಸುವುದು, ಬೆಳೆಗಳ ಕೊಯ್ಲು ಮತ್ತು ವಿಂಗಡಣೆಯಲ್ಲಿ ತೊಡಗುತ್ತಾರೆ. ಸಾಮಾನ್ಯವಾಗಿ ಮಹಿಳೆಯರು ಉತ್ಪನ್ನಗಳ ಮಾರಾಟಕ್ಕೆ ಮಾರುಕಟ್ಟೆಗೆ ಹೋಗುತ್ತಾರೆ. ಮಾರುಕಟ್ಟೆಯು ಮಧ್ಯರಾತ್ರಿ ಆರಂಭವಾಗಿ ಬೆಳಗ್ಗಿನ ಜಾವದಲ್ಲಿ ಕೊನೆಗೊಳ್ಳುತ್ತದೆ. ಅಲ್ಲಿಎಲ್ಲ ಬಗೆಯ ತರಕಾರಿಗಳನ್ನು ತಂಪಾದ ವಾತಾವರಣದಲ್ಲಿ ರವಾನಿಸಲಾಗುತ್ತದೆ ಮತ್ತು ಅದೇ ದಿನ ಅವೆಲ್ಲ ದೂರದ ಮಾರುಕಟ್ಟೆಯನ್ನೂ ತಲುಪಬೇಕು. ಮಹಿಳೆಯರ ಮೇಲಿನ ಒತ್ತಡವನ್ನು ಕಡಿಮೆಗೊಳಿಸಲು, ಸುರಕ್ಷಿತ ಮಾರುಕಟ್ಟೆ ವಾತಾವರಣ ಮತ್ತು ಸರಿಯಾದ ಸಾರಿಗೆ ವ್ಯವಸ್ಥೆ ರೂಪಿಸಲು **ಎಫ್‌ಪಿಒ**ಗಳನ್ನು ಸ್ಥಾಪಿಸಲಾಗಿದೆ.

ರಾತ್ರಿಯ ವೇಳೆ ಕೃಷಿ ಮಹಿಳೆಯರಿಗೆ ವಿಶ್ರಾಂತಿ ನೀಡುವ ಉದ್ದೇಶದಿಂದ, ಸಂಜೆಯೇ ಉತ್ಪನ್ನಗಳನ್ನು ಸಂಗ್ರಹಣೆಗೆ ಪ್ರಯತ್ನಿಸಿ ರಾತ್ರಿ ಅವನ್ನು ಮಾರುಕಟ್ಟೆಗೆ ಸಾಗಿಸಲಾಗುತ್ತಿದೆ. ಮನೆ ಬಾಗಿಲಿನಲ್ಲಿಯೇ ಬೆಳೆಗಳನ್ನು ಖರೀದಿಸಲಾಗುತ್ತಿದೆ ಮತ್ತು ರೈತರಿಗೆ ಹೆಚ್ಚಿನ ಮಾರುಕಟ್ಟೆ ದರ ಒದಗಿಸಲು ಟೆಂಡರ್ ವ್ಯವಸ್ಥೆ ಮುಖಾಂತರ ಮಾರಾಟ ಮಾಡಲಾಗುತ್ತಿದೆ. ಸದ್ಯ ಅಸ್ತಿತ್ವದಲ್ಲಿರುವ ಸಾರಿಗೆ ಮತ್ತು ಮಾರುಕಟ್ಟೆ ವ್ಯವಸ್ಥೆಯು ಅವೈಜ್ಞಾನಿಕವಾಗಿದೆ ಮತ್ತು ಮಹಿಳೆಯರಿಗೆ ಸುರಕ್ಷಿತವಾಗಿಲ್ಲ. ಜತೆಗೆ ಉತ್ಪನ್ನಗಳಿಗೆ ಕಡಿಮೆ ಬೆಲೆ ದೊರೆಯುತ್ತಿದೆ.

ಕರ್ನಾಟಕದ ಕರಾವಳಿ ಭಾಗದಲ್ಲಿರುವ ಗೋಕರ್ಣದ ತರಕಾರಿ ಬೆಳೆಗಾರರಿಗಾಗಿ **ರೈತ ಉತ್ಪಾದಕ ಸಂಘ** ವನ್ನು ಪ್ರಾರಂಭಿಸಲಾಗಿದೆ. ಇಲ್ಲಿ ರೈತ ಮಹಿಳೆಯರೇ ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ತರಕಾರಿಗಳನ್ನು ಮಧ್ಯರಾತ್ರಿಯಲ್ಲಿ ಏಜೆಂಟ್‌ರಿಗೆ ಮಾರುತ್ತಿದ್ದ 350 ರೈತರು **ರೈತ ಉತ್ಪಾದಕ ಸಂಘ**ವನ್ನು ಸೇರಿದ್ದಾರೆ. ತರಕಾರಿ ಮಾರಾಟ ನಡೆಯುತ್ತಿದ್ದ ಸ್ಥಳ ಅನಾರೋಗ್ಯಕರ ವಾತಾವರಣ ಮತ್ತು ಕಸದ ಜತೆಗೆ ತೆರೆದ ಒಳ ಚರಂಡಿಯನ್ನು ಹೊಂದಿತ್ತು. ಇದಕ್ಕಾಗಿ **'ಮನುವಿಕಾಸ'**ವು ಮಾರುಕಟ್ಟೆಗಾಗಿ ಸೂಕ್ತ ಜಾಗ ಮತ್ತು ಸೌಲಭ್ಯಗಳನ್ನು ಒದಗಿಸುವಂತೆ 'ಕೃಷಿ ಉತ್ಪಾದನಾ ಮಾರಾಟ ಸಮಿತಿ'ಗೆ ವಿನಂತಿ ಮಾಡಿದೆ. ರೈತರ ಮನೆ ಬಾಗಿಲಿನಲ್ಲೆ' ಉತ್ಪನ್ನಗಳನ್ನು ಸಂಗ್ರಹಿಸಲು ಮತ್ತು ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದು, ರೈತರಿಗೆ ಕನಿಷ್ಠ ಸಾರಿಗೆ ವೆಚ್ಚ ವಿಧಿಸಿ, ಟೆಂಡರ್ ಮುಖಾಂತರ ಮಾರಾಟ ಮಾಡುವ ಯೋಜನೆ ರೂಪಿಸಲಾಗುತ್ತಿದೆ.

ಕೆಲವು ಗಣನೆಗೆ ಬಾರದ ಉತ್ಪನ್ನಗಳು ಒಗ್ಗೂಡಿದಾಗ ರೈತರಿಗೆ ಲಾಭದೊರೆಯುತ್ತದೆ. ಹೆಚ್ಚಿನ ವಾಣಿಜ್ಯ ಸಂಗ್ರಾಹಕರು ರೈತರ ಸರಕುಗಳನ್ನು ಪ್ರತ್ಯೇಕಿಸುತ್ತಾರ ಮತ್ತು ಅವನ್ನು ಒಗ್ಗೂಡಿಸಿ ಸಾಗಣೆ ಮಾಡಲು ಹೆಚ್ಚಿನ ಶುಲ್ಕವನ್ನು ವಿಧಿಸುತ್ತಾರೆ. ಇಲ್ಲವಾದಲ್ಲಿ ಸೀಮಿತ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ದೊರೆಯುವ ಉತ್ಪನ್ನಗಳನ್ನು ಒಟ್ಟುಗೂಡಿಸುತ್ತಾರೆ. ನಮ್ಮ ವಾಹನದ ಉದ್ದೇಶವೆಂದರೆ ಪ್ರತ್ಯೇಕ ರೈತರನ್ನು ಮುಖ್ಯವಾಹಿನಿಯ ಮಾರುಕಟ್ಟೆಗೆ ಜೋಡಿಸುವುದು ಮತ್ತು ನಗಣ್ಯ ಸರಕುಗಳಿಗೂ ಮಾರುಕಟ್ಟೆಯಲ್ಲಿ ಅವಕಾಶ ಒದಗಿಸುವುದು. ಜತೆಗೆ ರೈತರು ತಮ್ಮ ಸರಕುಗಳನ್ನು ಎಸೆಯುವದರ ಬದಲು ಉತ್ತಮ ಬೆಲೆ ಪಡೆಯುವಂತಾಗಬೇಕು.

**'ಮನುವಿಕಾಸ'**ವು ಈ ವಾಹನದ ಶೇ. 50ರಷ್ಟು ವೆಚ್ಚ ಭರಿಸಿದ್ದು, ಉಳಿದ ಹಣವನ್ನು **'ಈಡಲ್‌ಗೀವ್ ಫೌಂಡೇಶನ್'** ನೀಡಿದ ಕೋವಿಡ್ ಅನುದಾನದಿಂದ ಭರಿಸಲಾಗಿದೆ. ಈ ವಾಹನದಿಂದ ಹೊಲಿಗೆ ಯಂತ್ರಗಳ ಸಾಗಣೆಗೂ ಸಹಾಯವಾಗಿದೆ. ಜತೆಗೆ ಹೊಲಿಗೆ ತರಬೇತಿ ವೆಚ್ಚ ಕಡಿಮೆಯಾಗುತ್ತಿದೆ.



'**ಮನುವಿಕಾಸ**'ವು ಉತ್ತರಕನ್ನಡದ ಗೋಕರ್ಣದಲ್ಲಿ ತರಕಾರಿ ಬೆಳೆಯುವ ರೈತರಿಗಾಗಿ '**ರೈತ ಉತ್ಪಾದಕ ಸಂಘ**ವನ್ನು ಪ್ರಚುರಪಡಿಸುತ್ತಿದೆ/ಉತ್ತೇಜಿಸುತ್ತಿದೆ. ತರಕಾರಿ ಬೆಳೆಗಾರರಿಗೆ ಬೀಜ ತಟ್ಟೆಗಳ ಅವಶ್ಯಕತೆಯನ್ನು ಮನಗಂಡು, 300 ತರಕಾರಿ ಬೆಳೆಗಾರರಿಗೆ 3000 ಬೀಜ ತಟ್ಟೆಗಳನ್ನು ವಿತರಿಸಲಾಗಿದೆ. ಇದರ ಸಾಗಣೆ ಸುಲಭ ಮತ್ತು ಇದರಲ್ಲಿನ ಸಸ್ಯಗಳಿಗೆ ಹಾನಿಯಾಗದಂತೆ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಲು ಅನುಕೂಲ ವಾಗುತ್ತದೆ. ಮೊಳಕೆ ತಟ್ಟೆಗಳಲ್ಲಿ ಬೀಜಗಳನ್ನು ಬಿತ್ತನೆ ಮಾಡುವ ಮುಖಾಂತರ ವರ್ಷದ ಯಾವ ಸಮಯದಲ್ಲಿ ಬೇಕಾದರೂ ನಾಟಿ ಆರಂಭಿಸಬಹುದು. ಬೀಜ ಮತ್ತು ಮೊಳಕೆಗಳನ್ನು ಹವಾಮಾನದ ವ್ಯತ್ಯಯದಿಂದ ರಕ್ಷಿಸಬಹುದು. ಇದರಿಂದಾಗಿ ತರಕಾರಿ ಬೆಳೆಗಾರರಿಗೆ ಸಂತೋಷವಾಗಿದೆ ಮತ್ತು ಫಲಾನುಭವಿಗಳಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ.

ಹೊಲಿಗೆ ತರಬೇತಿ ಪಡೆದ ಸ್ವ-ಸಹಾಯ ಸಂಘದ ಮಹಿಳೆಯರಿಗೆ ಹೊಲೆಯಲು ಬಟ್ಟೆಗಳನ್ನು ನೀಡಲಾಗಿದೆ. ಈ ಬಟ್ಟೆಗಳಿಂದ ಮಾಸ್ಕ ಅವರು ತಯಾರಿಸಿ, ಮಾರಾಟಮಾಡಿ ದಿನಕ್ಕೆ ರೂ. 500 ಗಳಿಸುತ್ತಿದ್ದಾರೆ. ಈ ಬಟ್ಟೆಯ ಪ್ರಮಾಣವು ಆವರ್ತನ ವಾಗುತ್ತದೆ. ಮಾರಾಟವಾಗದೇ ಉಳಿದ ಮಾಸ್ಕಗಳನ್ನು ಹಳ್ಳಿಗಳಲ್ಲಿನ ಬಡವರಿಗೆ, ಆರೋಗ್ಯ ಕಾರ್ಯಕರ್ತರಿಗೆ ಮತ್ತು ತರಬೇತಿಯಲ್ಲಿ ಭಾಗವಹಿಸುವವರಿಗೆ ಉಚಿತವಾಗಿ ನೀಡಲಾಗುತ್ತದೆ.

ಕೋವಿಡ್-19 ರಿಂದ ಬಳಲುತ್ತಿರುವ ಐದು ಕುಟುಂಬಗಳಿಗೆ ಅವಶ್ಯಕ ದಿನಸಿಗಳನ್ನು ನೀಡಲಾಗಿದೆ. 'ಮನುವಿಕಾಸ'ವು ರೂ.6000 ಬೆಲೆಯ ದಿನಸಿ ಕಿಟ್‌ಗಳನ್ನು ಖರೀದಿಸಿದ್ದು, ಐದು ಕುಟುಂಬಗಳ 30 ಸದಸ್ಯರಿಗೆ ವಿತರಿಸಿದೆ. ಆ ಸಮಯದಲ್ಲಿ ಆ ಕುಟುಂಬಗಳ ಎಲ್ಲ ಸದಸ್ಯರು ಮನೆಯಲ್ಲಿ ಕ್ವಾರಂಟೈನ್ ಆಗಿದ್ದರು. ಆದ್ದರಿಂದ ಅವರಿಗೆ ಆಹಾರ ತಯಾರಿಕೆಗೆ ದಿನಸಿ ವಸ್ತುಗಳು ಲಭ್ಯವಿರಲಿಲ್ಲ. ಆ ಸಮಯದಲ್ಲಿ 'ಮನುವಿಕಾಸ'ವು ಪಡಿತರವನ್ನು ನೀಡುವ ಮುಖಾಂತರ ಅವರಿಗೆ ನೆರವಾಗಿದೆ.

ಸಿದ್ದಾಪುರದಲ್ಲಿ ಕೆಲಸ ಪ್ರಗತಿಯಲ್ಲಿ ಇರುವಾಗಲೇ, ಸಮಯದಲ್ಲಿ ಮಹಾತ್ಮಾಗಾಂದಿ ರಾಷ್ಟೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಮಹಿಳಾ ಕಾರ್ಯಕರ್ತೆಯೊಬ್ಬರು ಅನಾರೋಗ್ಯದಿಂದ ನಿಧನರಾಗಿದ್ದಾರೆ. ನೊಂದಿದ್ದ ಕಾರ್ಯಕರ್ತೆಯ ಕುಟುಂಬಕ್ಕೆ ಸಂಸ್ಥೆಯು ರೂ.10,000 ನೆರವು ನೀಡಿದೆ.

### ಮನುವಿಕಾಸದಿಂದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಶಿಕ್ಷಣ ಮತ್ತು ಇತರ ಮಹಿಳೆಯರ ಜೀವನೋಪಾಯಕ್ಕೆ ಬೆಂಬಲ

ಕೋವಿಡ್-19ರ ಸಮಯದಲ್ಲಿ ವಿದ್ಯಾರ್ಥಿಗಳಿಗೆ ನಿಯಮಿತ ತರಗತಿಗಳು ಇರಲಿಲ್ಲ. ಪರ್ಯಾಯ ತರಗತಿಗಳು ಅಥವಾಆನ್‌ಲೈನ್ ತರಗತಿಗಳು ನಡೆಯುತ್ತಿದ್ದವು. ಇದಕ್ಕೆ ಮೊಬೈಲ್ ಅವಶ್ಯವಾಗಿತ್ತು. ಕೆಲ ಪಾಲಕರಿಗೆ ತಮ್ಮ ಮಕ್ಕಳ ಆನ್‌ಲೈನ್ ತರಗತಿಗೆ ಮೊಬೈಲ್ ಖರೀದಿಸಿ ನೀಡುವ ಆರ್ಥಿಕತೆ ಇರಲಿಲ್ಲ. '**ಮನುವಿಕಾಸ**'ವು ಇಂತಹ ವಿದ್ಯಾರ್ಥಿಗಳಿಗೆ ಹೊಸ ಮೊಬೈಲ್ ಖರೀದಿಸಿ ಅವರಿಗೆ ನೀಡಿದೆ. ರೂ.33,000 ಬೆಲೆಯಲ್ಲಿ ಮೊಬೈಲ್‌ಗಳನ್ನು ಖರೀದಿಸಿ ನಾಲ್ಕು ವಿದ್ಯಾರ್ಥಿಗಳಿಗೆ ನೀಡಲಾಗಿದೆ.



ಆರ್ಥಿಕ ತೊಂದರೆಗಳನ್ನು ಹೊಂದಿರುವ 20 ಮಹಿಳೆಯರಿಗೆ, ವಿಶೇಷವಾಗಿ ವಿಧವೆಯರು, ವಿಚ್ಛೇದಿತರು, ಅನಾರೋಗ್ಯದಿಂದ ಬಳಲುತ್ತಿರುವ ಕುಟುಂಬಗಳಿಗೆ ಆಹಾರಗಳಿಸಲು ಸಹಾಯವಾಗುವಂತೆ ಹೊಲಿಗೆ ಯಂತ್ರಗಳನ್ನು ಒದಗಿಸಲಾಗಿದೆ. ಕೋಳಿ ಸಾಕಣೆಯನ್ನು ಉತ್ತೇಜಿಸಲು ಸ್ವ-ಸಹಾಯ ಸಂಘದ ಸದಸ್ಯರಿಗೆ ಕೋಳಿಮರಿಗಳನ್ನು ವಿತರಿಸಲಾಗಿದೆ. ಸಿರ್ಸಿ, ಸಿದ್ದಾಪುರ, ಮುಂಡಗೋಡು, ಯಲ್ಲಾಪುರ ಭಾಗದ 81 ಮಹಿಳೆಯರಿಗೆ 2000 ಕೋಳಿಮರಿಗಳನ್ನು ವಿತರಿಸಲಾಗಿದೆ.

# ಮನುವಿಕಾಸದಿಂದ ಶಿರಸಿ ಖಾಸಗೀ ಶಾಲಾ ಶಿಕ್ಷಕರಿಗೆ ಅಗತ್ಯ ದಿನಸಿಕಿಟ್‌ಗಳ ವಿತರಣೆ



ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಈಡಲ್‌ಗೀವ್ ಫೌಂಡೇಶನ್, ದಲ್ಯಾನ ಫೌಂಡೇಶನ್‌ಗಳ ಸಹಯೋಗದೊಂದಿಗೆ ಕೋವಿಡ್ –19 ತುರ್ತು ಸಂದರ್ಭದಲ್ಲಿ ಶಿರಸಿ ತಾಲೂಕಿನ ಖಾಸಗಿ ಶಾಲಾ ಶಿಕ್ಷಕರಿಗೆ ಅಗತ್ಯ ದಿನಸಿ ಕಿಟ್ ಗಳ ವಿತರಣಾ ಕಾರ್ಯಕ್ರಮವನ್ನು ನಗರದ ಲಯನ್ಸ್ ಆಂಗ್ಲ ಮಾಧ್ಯಮ ಶಾಲೆಯ ಆವರಣದಲ್ಲಿ ದಿನಾಂಕ **01/07/2021** ರಂದು ಹಮ್ಮಿಕೊಂಡಿತ್ತು.

65ಕ್ಕೂ ಹೆಚ್ಚು ಅಗತ್ಯ ದಿನಸಿ ಕಿಟ್ ಗಳನ್ನು ಖಾಸಗಿ ಶಾಲಾ ಶಿಕ್ಷಕರಿಗೆ ವಿತರಿಸಿ ಮಾತನಾಡಿದ ಉತ್ತರಕನ್ನಡ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀ ಭೀಮಣ್ಣ ನಾಯ್ಕ "ಇಂದು ಕೊರೋನಾದ ಎರಡನೇ ಅಲೆ ಮುಕ್ತಾಯವಾಗಿದ್ದು ಮೂರನೆ ಅಲೆ ಬರುವ ಹಂತದಲ್ಲಿದೆ, ಇದು ಮಕ್ಕಳಿಗೆ ಮಹಾ ಕಂಟಕವನ್ನು ತಂದೊಡ್ಡುತ್ತದೆ ಎನ್ನುವದರಲ್ಲಿ ಸಂಶಯವಿಲ್ಲ. ಶಿಕ್ಷಕರಾದ ತಾವು ಸಮಾಜಕ್ಕೆ ಉತ್ತಮ ನಾಗರಿಕರನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದೀರಿ. ಮಕ್ಕಳಿಗೆ ಕೊರೋನಾ ಜಾಗೃತಿ ಮತ್ತು ಮುನ್ನೆಚ್ಚರಿಕೆ ನೀಡುವಲ್ಲಿ ಶಿಕ್ಷಕರ ಜವಾಬ್ದಾರಿ ಅತೀ ಮುಖ್ಯ. ಅನುದಾನ ರಹಿತ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರ ಆರ್ಥಿಕ ಪರಿಸ್ಥಿತಿಯನ್ನು ಅರಿತು ಮನುವಿಕಾಸ ಸಂಸ್ಥೆ ಅಗತ್ಯಕಿಟ್ ವಿತರಣಾ ಕಾರ್ಯಕ್ಕೆ ಮುಂದಾಗಿರುವದು ತೀರಾ ಅಭಿನಂದನಾರ್ಹ" ಎಂದರು.

ಕೋವಿಡ್ 19ರ ತುರ್ತು ಸಂದರ್ಭದಲ್ಲಿ ಸರಕಾರದ ಜೊತೆಜೊತೆಗೆ ಸ್ವಯಂ ಸೇವಾ ಸಂಸ್ಥೆಗಳೂ ನೆರವಿನ ಹಸ್ತಚಾಚಿವೆ. ಅದರಲ್ಲಿಯೂ ಮನುವಿಕಾಸ ಸಂಸ್ಥೆಯು ಮುಂಚೂಣಿಯಲ್ಲಿದ್ದು, ಶಿಕ್ಷಣ, ಗ್ರಾಮೀಣ ಅಭಿವೃದ್ಧಿ, ಕೆರೆಗಳ ಪುನಶ್ಚೇತನ ಕಾರ್ಯದಲ್ಲಿ ಹಲವು ವರ್ಷಗಳಿಂದ ತನ್ನನ್ನು ತಾನು ಗುರುತಿಸಿಕೊಂಡಿದ್ದು, ತಳ ಮಟ್ಟದ ಜನಸಮುದಾಯಕ್ಕೆ ನೆರವಿನ ಹಸ್ತ ಚಾಚಿದೆ. ಇದೀಗ ಮತ್ತೂ ಒಂದು ಹೆಜ್ಜೆ ಮುಂದಕ್ಕಿಟ್ಟು ಖಾಸಗಿ ಶಾಲಾ ಶಿಕ್ಷಕರಿಗೆ ಅಗತ್ಯ ದಿನಸಿ ಕಿಟ್‌ಗಳನ್ನು ಒದಗಿಸುತ್ತಿರುವದು ಸಮಾಜಮುಖಿ ಕೆಲಸಕ್ಕೆ ಹಿಡಿದ ಕೈಗನ್ನಡಿ ಎಂದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ "ಕೋವಿಡ್ ನಂತರದ ದಿನಗಳು ಸಮಾಜದ ಎಲ್ಲಾ ವರ್ಗದ ಜನರಿಗೂ ಕಷ್ಟವಾಗಿದೆ. ಈಗಾಗಲೇ ಮನುವಿಕಾಸ ಸಂಸ್ಥೆಯು ಸಮಾಜದ ಸಮುದಾಯಕ್ಕೆ 3000 ಅಗತ್ಯ ದಿನಸಿ ಕಿಟ್‌ಗಳನ್ನು ವಿತರಿಸಿದೆ. ನಿಜವಾಗಿ ಕಷ್ಟದಲ್ಲಿರುವ ವರನ್ನು ಗುರುತಿಸಿ ಅವರಿಗೆ ಸಹಾಯ ಮಾಡುವುದು ಕೂಡಾ ಒಂದು ಸವಾಲಿನ ಸಂಗತಿಯಾಗಿದ್ದು, ಕೇವಲ ಉಡುಗೆಯಿಂದ ಬಡವ ಶ್ರೀಮಂತ ಎಂದು ಗುರುತಿಸುವದು ಅಸಾಧ್ಯ, ರಾಜಕೀಯ ಹಿತಾಸಕ್ತಿಯನ್ನು ಬಿಟ್ಟು ಮಾನವೀಯತೆಯ ಕಡೆ ರಾಜಕೀಯ ನಾಯಕರು ಕೆಲಸ ಮಾಡಿದರೆ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ, ಮನುವಿಕಾಸ ಸಂಸ್ಥೆ ಈಗಾಗಲೇ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ತಲಾ 1.50 ಲಕ್ಷದವರೆಗೆ ಹಣ ಸಂದಾಯ ಮಾಡಲು ಯೋಜನೆ ಸಿದ್ದಪಡಿಸಿದೆ" ಎಂದರು.

ಶಿರಸಿ ನಗರಸಭಾ ಉಪಾಧ್ಯಕ್ಷರಾದ ಶ್ರೀಮತಿ ವೀಣಾ ಶೆಟ್ಟಿ ಮಾತನಾಡಿ "ಮನುವಿಕಾಸ ಸಂಸ್ಥೆಯು ಸಮಾಜದ ಆರೋಗ್ಯದ ಹಿತ ಕಾಪಾಡುವಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ. ಸರಕಾರದ ಹಲವು ಯೋಜನೆಗಳ ಸೌಲಭ್ಯಗಳು ಸಮುದಾಯವನ್ನು ತಲುಪುವಲ್ಲಿ ಮನುವಿಕಾಸದ ಪ್ರಯತ್ನ ಅವಿರತವಾದುದು, ಸಮಾಜದ ಪ್ರತಿಯೊಬ್ಬರೂ ಸಹ ಮಾನಸಿಕ ಸ್ಥೈರ್ಯ ಬೆಳೆಸಿಕೊಂಡರೆ ಮಾತ್ರ ಕೊರೋನಾದಿಂದ ಪಾರಾಗಲು ಸಾಧ್ಯ" ಎಂದರು.

ಶಿರಸಿಯ ನಗರಸಭಾ ಅಧ್ಯಕ್ಷರಾದ ಶ್ರೀ. ಗಣಪತಿ ನಾಯ್ಕ ಮಾತನಾಡಿ "ಆತ್ಮಬಲವನ್ನು ಹೆಚ್ಚಿಸಿ ಕೊಳ್ಳುವದರಿಂದ ಮಾತ್ರ ಕೊರೋನಾ ವಿರುದ್ದ ಹೋರಾಡಲು ಸಾಧ್ಯ, ಶಿರಸಿ ನಗರದಲ್ಲಿ ಹಲವು ಜನ ಕೊರೊನಾ ಬಂದು ಭಯಕ್ಕೆ ನಿಧನರಾಗಿರುವದು ಆತ್ಮಬಲದ ಕೊರತೆಯಿಂದಾಗಿ, ಮನುವಿಕಾಸ ಸಂಸ್ಥೆಯವರು ಕಳೆದ ವರ್ಷ 7000ಕ್ಕೂ ಹೆಚ್ಚು ಅಗತ್ಯ ದಿನಸಿ ಕಿಟ್ ಗಳನ್ನು ಸಮಾಜದ ಹಲವು ಸಮುದಾಯಗಳಿಗೆ ಹಂಚಿಕೆ ಮಾಡಿದ್ದಾರೆ. ಪ್ರಸಕ್ತ ವರ್ಷವೂ ಸಹ 3500 ಅಗತ್ಯ ದಿನಸಿ ಕಿಟ್‌ಗಳ ಹಂಚಿಕೆಯ ಗುರಿಯನ್ನು ಹೊಂದಿದ್ದಾರೆ, ಸಮಾಜದ ಬಡ ವರ್ಗದವರಿಗೆ ಹಲವು ಯೋಜನೆ ಮತ್ತು ಸೌಲಭ್ಯಗಳು ಲಭ್ಯವಿದ್ದು, ಮಧ್ಯಮ ವರ್ಗದ ಸಮುದಾಯಕ್ಕೆ ಸೌಲಭ್ಯಗಳ ಕೊರತೆ ಎದುರಾಗಿದೆ. ಅದರಲ್ಲಿ ಖಾಸಗಿ ಶಾಲೆಗಳ ಶಿಕ್ಷಕರೂ ಸೇರಿದ್ದಾರೆ. ಅವರಿಗೆ ಜೀವನಕ್ಕೆ ಅಗತ್ಯವಾದ ಮೂಲಭೂತ ಸಾಮಾಗ್ರಿಗಳನ್ನು ವಿತರಿಸುತ್ತಿರುವದು. ಸಮಸ್ಯೆಯ ಗುರುತಿಸುವಿಕೆ ಮತ್ತು ಪರಿಹಾರ ಕೊಡುವಿಕೆಗೆ ಸರಳ ಮಾರ್ಗವಾಗಿದೆ" ಎಂದರು.

ಲಯನ್ಸ್ ಆಂಗ್ಲ ಮಾಧ್ಯಮಶಾಲೆಯ ಮುಖ್ಯೋಪಾಧ್ಯಾಯ ರಾದ ಶ್ರೀ ಶಶಾಂಕ್ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು. ಶಿರಸಿ ತಾಲೂಕಿನ ಖಾಸಗಿ ಶಾಲೆಗಳ ಕಾರ್ಯದರ್ಶಿಯಾದ ಶ್ರೀಮತಿ ಲಕ್ಷ್ಮಿ ಭಟ್ಟ ವಂದಿಸಿದರು.

ಕಾರ್ಯಕ್ರಮದಲ್ಲಿ ಶಿರಸಿ ನಗರಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ನಂದನ ಸಾಗರ, ಶಿರಸಿ ನಗರಸಭಾ ಸದಸ್ಯರಾದ ಶ್ರೀ ರಮಾನಂದ ಭಟ್ಟ, ಶ್ರೀನಿಕೇತನ ಶಾಲೆಯ ನಿರ್ದೇಶಕರಾದ ಶ್ರೀ ದೀಪಕ್ ದೊಡ್ಡೂರು, ಶಿರಸಿ ತಾಲೂಕಾ ಅಟೋಚಾಲಕರು ಹಾಗೂ ಮಾಲೀಕರ ಸಂಘದ ಕಾರ್ಯದರ್ಶಿ ಶ್ರೀ ವಿಶ್ವನಾಥ ಗೌಡ, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಶ್ರೀ ಪವನ್ ಬೊಮ್ಮನಹಳ್ಳಿ, ಶ್ರೀ ಸುಬ್ರಹ್ಮಣ್ಯ ಹೆಗಡೆ, ಶ್ರೀ ಅಶ್ವತ್ಥ ನಾಯ್ಕ್ ಶ್ರೀ ಗಣಪತಿ ಹೆಗಡೆ ಮತ್ತು ಖಾಸಗಿ ಶಾಲೆಗಳ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.




# ಮನುವಿಕಾಸದಿಂದ ಸಿದ್ದಾಪುರ ತಾಲೂಕಿನ ಖಾಸಗಿ ಶಾಲಾ ಶಿಕ್ಷಕರಿಗೆ ಅಗತ್ಯ ದಿನಸಿಕಿಟ್‌ಗಳ ವಿತರಣೆ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಈಡಲ್‌ಗೀವ್ ಫೌಂಡೇಶನ್, ದಲ್ಯಾನ ಫೌಂಡೇಶನ್‌ಗಳ ಸಹಯೋಗದೊಂದಿಗೆ ಕೋವಿಡ್-19 ರತುರ್ತು ಸಂದರ್ಭದಲ್ಲಿ ಸಿದ್ದಾಪುರ ತಾಲೂಕಿನ ಖಾಸಗಿ ಶಾಲಾ ಶಿಕ್ಷಕರಿಗೆ ಅಗತ್ಯ ದಿನಸಿ ಕಿಟ್‌ಗಳ ವಿತರಣಾ ಕಾರ್ಯಕ್ರಮವನ್ನು ನಗರದ ಶ್ರೀ ಸಿದ್ಧಿ ವಿನಾಯಕ ಶಾಲೆಯ ಆವರಣದಲ್ಲಿ ದಿನಾಂಕ **01/07/2021**ರಂದು ಹಮ್ಮಿಕೊಂಡಿತ್ತು.

ಸುಮಾರು 22ಕ್ಕೂ ಹೆಚ್ಚು ಖಾಸಗಿ ಶಾಲಾ ಶಿಕ್ಷಕರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿ ಮಾತನಾಡಿದ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ "ಹಲವು ಖಾಸಗಿ ಶಾಲೆಗಳಲ್ಲಿ ಡೊನೇಶನ್‌ಗಳನ್ನು ಹೇರಳವಾಗಿ ಪಾಲಕರಿಂದ ತೆಗೆದುಕೊಳ್ಳಲಾಗುತ್ತದೆ. ಆದರೆ ಅಲ್ಲಿ ಕಾರ್ಯ ನಿರ್ವಹಿಸುವ ಶಿಕ್ಷಕರಿಗೆ ಮಾತ್ರ ಸೂಕ್ತ ಸಮಯದಲ್ಲಿ ಸಂಬಳದ ವ್ಯವಸ್ಥೆ ಆಗುತ್ತಿಲ್ಲ. ಕೋವಿಡ್ ಮೊದಲ ಅಲೆ ಮತ್ತು ನಂತರದ ಅಲೆಗಳಲ್ಲಿ ಖಾಸಗಿ ಶಾಲಾ ಶಿಕ್ಷಕರ ಪರಿಸ್ಥಿತಿಯನ್ನು ಸರಕಾರದ ಸಮೇತವಾಗಿ ಯಾರೂ ಸರಿಯಾಗಿ ಗುರುತಿಸಿಲ್ಲ. ಇದು ತೀರಾ ದುರದೃಷ್ಟಕರ, ಈ ನಿಟ್ಟಿನಲ್ಲಿ ಖಾಸಗಿ ಶಾಲಾ ಶಿಕ್ಷಕರಿಗೆ ಸ್ವಲ್ಪವಾದರೂ ಸಹಾಯವಾಗಲಿ ಎಂದು ಮನುವಿಕಾಸ ಸಂಸ್ಥೆಯು ಅತ್ಯಂತ ಅವಶ್ಯಕವಿರುವ ಆಯ್ದ ಶಿಕ್ಷಕರಿಗೆ ಕಿಟ್‌ಗಳನ್ನು ವಿತರಿಸುತ್ತಿದೆ, ಮುಂಬರುವ ದಿನಗಳಲ್ಲಿ ಈ ಯೋಜನೆಯನ್ನು ಇನ್ನಷ್ಟು ಸಮುದಾಯಕ್ಕೆ ವಿಸ್ತರಿಸಲಾಗುವುದು" ಎಂದರು

ಉತ್ತರಕನ್ನಡ ಜಿಲ್ಲಾ ಖಾಸಗಿ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿಗಳಾದ ಶ್ರೀ ಸಂತೋಷ ನಾಯಕ್ ಮಾತನಾಡಿ "ಮನುವಿಕಾಸ ಸಂಸ್ಥೆಯು ಕೋವಿಡ್-19ರ ತುರ್ತು ಸಂದರ್ಭದಲ್ಲಿ ಖಾಸಗಿ ಶಾಲೆಯಲ್ಲಿ ಕೆಲಸ ಮಾಡುವ ಶಿಕ್ಷಕರನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ದಿನಸಿ ಕಿಟ್‌ಗಳನ್ನು ವಿತರಿಸುತ್ತಿರುವುದು ಅಭಿನಂದನಾರ್ಹ, ಅವರ ಪ್ರಯತ್ನ ಮತ್ತು ಪರಿಶ್ರಮ ಅವಿತರವಾಗಿ ಮುಂದುವರೆಯಲಿ, ಸರಕಾರ ಕೋವಿಡ್ 2ನೇ ಅಲೆ ಬಂದಾಗ ಖಾಸಗಿ ಶಾಲಾ ಶಿಕ್ಷಕರಿಗೆ ಘೋಷಿಸಿದ ಪರಿಹಾರ ಇನ್ನೂ ಮರಿಚಿಕೆಯಾಗಿಯೇ ಉಳಿದಿದೆ, ಯೋಜನೆಯನ್ನು ಪಡೆದುಕೊಳ್ಳಲು ಅಡೆತಡೆಗಳೆ ಅಧಿಕವಾಗಿವೆ" ಎಂದರು.

ಶಿರಸಿ ತಾಲೂಕಿನ ಖಾಸಗಿ ಶಾಲೆಗಳ ಕಾರ್ಯದರ್ಶಿಯಾದ ಶ್ರೀಮತಿ ಲಕ್ಷ್ಮೀ ಭಟ್ಟ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು

ಕಾರ್ಯಕ್ರಮದಲ್ಲಿ ಶಿರಸಿ ತಾಲೂಕಾ ಆಟೋಚಾಲಕರು ಹಾಗೂ ಮಾಲೀಕರ ಸಂಘದ ಕಾರ್ಯದರ್ಶಿ ಶ್ರೀ ವಿಶ್ವನಾಥ ಗೌಡ, ಮನುವಿಕಾಸ ಸಂಸ್ಥೆಯು ಸಿಬ್ಬಂದಿಗಳಾದ ಶ್ರೀ ಪವನ್ ಬೊಮ್ಮನಹಳ್ಳಿ, ಶ್ರೀ ಸುಬ್ರಹ್ಮಣ್ಯ ಹೆಗಡೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.



# ಮನುವಿಕಾಸದಿಂದ ದಿನಗೂಲಿ ಕೂಲಿ ಕಾರ್ಮಿಕರಿಗೆ ಅಗತ್ಯ ಪರಿಕರಗಳ ವಿತರಣೆ



ಕೋವಿಡ್ –19ರ ತುರ್ತು ಸಂದರ್ಭದಲ್ಲಿ ದೇಶವ್ಯಾಪಿ ಲಾಕ್‌ಡೌನ್ ಆದಾಗ ಮನುವಿಕಾಸ ಸಂಸ್ಥೆಯು ಈಡಲ್‌ಗೀವ್ ಫೌಂಡೇಶನ್‌ನ ಸಹಯೋಗದೊಂದಿಗೆ ದಿನಗೂಲಿ ಕೆಲಸಗಾರರಿಗೆ ಉದ್ಯೋಗವನ್ನು ದೊರಕಿಸಿಕೊಡುವ ಮತ್ತು ಅವರಲ್ಲಿ ಆರ್ಥಿಕ ಮನೋಬಲವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಲಾಕ್‌ಡೌನ್ ಸಮಯದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸಲು ಪ್ರಯತ್ನಿಸಿದೆ.



ಯೋಜನೆಯ ಅಡಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಹಲವು ದಿನಗೂಲಿ ಕಾರ್ಮಿಕರ ಉತ್ಸಾಹವನ್ನು ಇಮ್ಮಡಿಗೊಳಿಸಿ ಅವರಿಗೆ ಉದ್ಯೋಗವನ್ನು ತಮ್ಮದಾಗಿಸಿ ಕೊಂಡು ಬದುಕನ್ನು ನಡೆಸಲು ಯಲ್ಲಾಪುರ ಮತ್ತು ಮುಂಡಗೋಡ ತಾಲೂಕುಗಳ ಆಯ್ದ ಕೂಲಿ ಕಾರ್ಮಿಕರಿಗೆ ಕೂಲಿ ಮಾಡಲು ಅವಶ್ಯಕ ಉಪಕರಣಗಳಾದ ಗುದ್ದಲಿ, ಪಿಕಾಸಿ ಮತ್ತು ಬುಟ್ಟಿಗಳನ್ನು ನೀಡಲಾಗಿದೆ.




ಕೋಲ್‌ಸಿರ್ಸಿಯಲ್ಲಿ 56 ಜನರಿಗೆ, ಯಲ್ಲಾಪುರದಲ್ಲಿ 85 ಜನರಿಗೆ ಮುಂಡಗೋಡಿನ ಗುಂಜಾವತಿಯಲ್ಲಿ 220 ಫಲಾನುಭವಿಗಳಿಗೆ ಇದಲ್ಲದೆ ಸಿದ್ದಾಪುರದಲ್ಲಿ ನಡೆದ ಮಹಿಳಾ ಸಮಾವೇಶದಲ್ಲಿ ಸಹ ಆಯ್ದ 15 ಜನರಿಗೆ ಪರಿಕರಗಳನ್ನು ವಿತರಿಸಲಾಗಿದೆ.

# ಮನುವಿಕಾಸದಿಂದ ಸರ್ಕಸ್ ಕಂಪನಿಯವರಿಗೆ ಅಗತ್ಯ ದಿನಸಿ ವಿತರಣೆ



ಸುಮಾರು ಎರಡು ವರ್ಷಗಳಿಂದ ಶಿರಸಿಯಲ್ಲಿ ನೆಲೆಯೂರಿದ್ದ ಸರ್ಕಸ್ ಕಂಪನಿಯವರು ಕೋವಿಡ್ –19 ರ ತುರ್ತು ಸಂದರ್ಭದಲ್ಲಿ ತಮ್ಮ ಸ್ವ ಊರುಗಳಿಗೆ ತೆರಳಲಾರದೇ ಇತ್ತ ಉದ್ಯೋಗವೂ ಲಭಿಸದೆ ದಿನದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಲ್ಲಿ ಬಹಳ ಚಿಂತಾಜನಕವಾಗಿದ್ದರು.

ಈ ಸಂದರ್ಭದಲ್ಲಿ ಶಿರಸಿ ತಹಶೀಲ್ದಾರ ಎಂ. ಆರ್‌ಕುಲಕರ್ಣಿ ವಿನಂತಿಯ ಮೇರೆಗೆ ಮನುವಿಕಾಸ ಸಂಸ್ಥೆಯು, ಅವರ ಪರಿಸ್ಥಿತಿಯನ್ನು ಮನಗಂಡು ಸುಮಾರು 50 ಜನರಿರುವ ತಂಡಕ್ಕೆ, ಒಂದು ತಿಂಗಳಿಗಾಗುವಷ್ಟು ಅಗತ್ಯ ದಿನಸಿ ಸಾಮಾಗ್ರಿಗಳನ್ನು ತಹಶೀಲ್ದಾರರ ಉಪಸ್ಥಿತಿಯಲ್ಲಿ ವಿತರಿಸಿತು.

# ಮನುವಿಕಾಸದಿಂದ ಸಿದ್ದಾಪುರದ ಮನ್ಮನೆ ಗ್ರಾಮ ಪಂಚಾಯತಿಯಲ್ಲಿ ದಿನಗೂಲಿ ಕಾರ್ಮಿಕರಿಗೆ ಅಗತ್ಯ ಕೃಷಿ ಸಲಕರಣೆಗಳ ವಿತರಣೆ



ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಈಡಲ್ ಗೀವ್ ಫೌಂಡೇಶನ್‌ನ ಸಹಯೋಗದೊಂದಿಗೆ ಕೋವಿಡ್–19ರ ಲಾಕ್ ಡೌನ್ ಸಮಯದಲ್ಲಿ ಮಹಾತ್ಮಾಗಾಂಧಿ ರಾಷ್ಟೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸಲು ಪ್ರಯತ್ನಿಸಿದೆ. ಈ ಯೋಜನೆಯ ಅಡಿಯಲ್ಲಿ ಉತ್ತಮ ಕೆಲಸವನ್ನು ನಿರ್ವಹಿಸಿದ ಸಿದ್ದಾಪುರದ ಮನ್ಮನೆ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವಂತಹ ಆಯ್ದ ಕೂಲಿ ಕಾರ್ಮಿಕರಿಗೆ ಪ್ರೋತ್ಸಾಹವನ್ನು ನೀಡುವ ಉದ್ದೇಶದಿಂದ ದಿನಾಂಕ 3/07/2021ರಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಸ್ಥಳೀಯ ಮುಖಂಡರಾದ ಶ್ರೀ. ವಸಂತ ನಾಯ್ಕ್ ಮಾತನಾಡಿ “ಮನುವಿಕಾಸ ಸಂಸ್ಥೆ ಈ ಮೊದಲಿನಿಂದಲೂ ನೆಲ ಜಲ ಸಂರಕ್ಷಣೆ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದು ಇದರ ಜೊತೆ ಜೊತೆಗೆ ಕೂಲಿ ಕಾರ್ಮಿಕರ ಹಿತದೃಷ್ಟಿಯಿಂದ ರೂಪಿತವಾಗಿರುವ ಈ ಯೋಜನೆ ನಿಜವಾಗಿಯೂ ಅವರ ಸಾಮಾಜಿಕ ಕಾಳಜಿ ಮತ್ತು ಸಮುದಾಯದ ಹಿತವನ್ನು ತೋರಿಸುತ್ತದೆ, ಈ ಕಾರ್ಯ ನಿಜವಾಗಿಯೂ ಅಭಿನಂದನಾರ್ಹ” ಎಂದರು.

ಕಾರ್ಯಕ್ರಮದಲ್ಲಿ ಮನ್ಮನೆ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಶ್ರೀಮತಿ ಭಾರತಿ ರಾಜಕುಮಾರ ನಾಯ್ಕ್, ಉಪಾಧ್ಯಕ್ಷರಾದ. ಶ್ರೀ. ನಾಗರಾಜ ರಾಮಾ ನಾಯ್ಕ್, ಸದಸ್ಯರಾದ ಶ್ರೀಮತಿ ವಾಸಂತಿ ಮಂಜ ಹರಿಜನ ಸೇರಿದಂತೆ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಶ್ರೀ ಎಂ. ಜಿ. ಹೆಗಡೆ, ಶ್ರೀ ಪವನ ಬೊಮ್ಮನಹಳ್ಳಿ, ಶ್ರೀ ಪುನೀತ್ ನಾಯ್ಕ್, ಶ್ರೀ ಸೂರ್ಯನಾರಾಯಣ ಹೆಗಡೆ, ಶ್ರೀ ಗಣಪತಿ ಹೆಗಡೆ ಸೇರಿದಂತೆ ಗ್ರಾಮದ ನಾಗರಿಕರು ಹಾಜರಿದ್ದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ “ಸರಕಾರದಿಂದ ಸಮುದಾಯಗಳ ಅಭಿವೃದ್ಧಿಗಾಗಿ ಘೋಷಣೆಯಾಗುವ ಹಲವಾರು ಯೋಜನೆಗಳು ಗ್ರಾಮ ಪಂಚಾಯತ್ ಮಟ್ಟಕ್ಕೆ ಬರುವ ಮೊದಲೇ ಬೇರೆ ವರ್ಗವನ್ನು ತಲುಪಿರುತ್ತವೆ. ಹಲವು ಸಾರಿ ಇದು ಗ್ರಾಮ ಪಂಚಾಯತ್ ಅಧಿಕಾರಿಗಳ ನಿರ್ಲಕ್ಯ ಮತ್ತು ಬೇಜವಾಬ್ದಾರಿಯಿಂದ ಜನಸಮುದಾಯವನ್ನು ತಲುಪಲು ಸಾಧ್ಯವೇ ಆಗಿಲ್ಲ ಇದು ದುರದೃಷ್ಟಕರ ಸಂಗತಿ, ಇಂತಹ ಸಮಯದಲ್ಲಿ ಮನುವಿಕಾಸ ಕೂಲಿ ಕಾರ್ಮಿಕರನ್ನು ಗಮನದಲ್ಲಿರಿಸಿಕೊಂಡು ಈ ಪೂರಕ ಚಟುವಟಿಕೆಯನ್ನು ರೂಪಿಸಿದೆ.” ಎಂದರು.

ಇದೇ ಸಂದರ್ಭದಲ್ಲಿ ಆಯ್ದ 50 ಜನ ಕೂಲಿ ಕಾರ್ಮಿಕರಿಗೆ ಕೂಲಿಗೆ ಅವಶ್ಯಕವಿರುವ ಗುದ್ದಲಿ, ಪಿಕಾಸಿ ಮತ್ತು ಬುಟ್ಟಿಗಳನ್ನು ವಿತರಿಸಲಾಯಿತು.






# ಯಲ್ಲಾಪುರದಲ್ಲಿ ಮನುವಿಕಾಸದಿಂದ ಕೂಲಿ ಕಾರ್ಮಿಕರಿಗೆ ಅಗತ್ಯ ಕೂಲಿ ಸಲಕರಣೆಗಳ ವಿತರಣೆ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಈಡಲ್ ಗೀವ್ ಫೌಂಡೇಶನ್‌ನ ಸಹಯೋಗದೊಂದಿಗೆ ಕೋವಿಡ್–19 ರ ಲಾಕ್‌ಡೌನ್ ಸಮಯದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಅಡಿಯಲ್ಲಿ ಹಲವಾರು ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಶವನ್ನು ಕಲ್ಪಿಸಿದೆ.

ಈ ಯೋಜನೆಯ ಅಡಿಯಲ್ಲಿ ಉತ್ತಮ ಕೆಲಸವನ್ನು ನಿರ್ವಹಿಸಿದ ಯಲ್ಲಾಪುರ ತಾಲೂಕಿನ ಕಿರವತ್ತಿ, ಮದನೂರು ಮತ್ತು ಕಳಸೆ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವಂತಹ ಆಯ್ದ 85 ಕೂಲಿ ಕಾರ್ಮಿಕರಿಗೆ ಪ್ರೋತ್ಸಾಹವನ್ನು ನೀಡುವ ಉದ್ದೇಶದಿಂದ ದಿನಾಂಕ 15/4/2021 ರಂದು ಯಲ್ಲಾಪುರದ ಗಾಂಧಿ ಕುಟೀರದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಕೂಲಿ ಕಾರ್ಮಿಕರಿಗೆ ಅಗತ್ಯ ಸಲಕರಣೆಗಳನ್ನು ವಿತರಿಸಿ ಮಾತನಾಡಿದ ಸಚಿವರಾದ ಶ್ರೀ ಶಿವರಾಮ ಹೆಬ್ಬಾರ "ಮನುವಿಕಾಸ ಸಂಸ್ಥೆಯು ಈ ಮೊದಲಿನಿಂದಲೂ ಗ್ರಾಮೀಣ ಅಭಿವೃದ್ಧಿ ಮತ್ತು ನೆಲ–ಜಲ ಸಂರಕ್ಷಣೆ ಸಂಬಂಧಿತ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದೆ. ಅದಕ್ಕೆ ಅವರು ಮಾಡಿರುವ ಕೆಲಸಗಳೇ ಸಾಕ್ಷಿಯಾಗಿವೆ. ಬಡವರು ಮತ್ತು ಕೂಲಿ ಕಾರ್ಮಿಕ ವರ್ಗವನ್ನು ಗಮದಲ್ಲಿರಿಸಿ ಅವರಿಗೆ ಅಗತ್ಯ ಕೂಲಿ ಸಲಕರಣೆಗಳನ್ನು ವಿತರಿಸುತ್ತಿರುವದು ಸಂಸ್ಥೆಯ ವಿಶಾಲ ಮನೋಭಾವನೆಯನ್ನು ತೋರ್ಪಡಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ "ಜನ ತಳಮಟ್ಟದ ಸಮುದಾಯವನ್ನು ತಲುಪಲು ಮತ್ತು ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಮನುವಿಕಾಸ ಸಂಸ್ಥೆಯು ಹಲವು ಕ್ರಿಯಾ ಯೋಜನೆಯನ್ನು ರೂಪಿಸಿದ್ದು ಅದರಲ್ಲಿ ಕೂಲಿ ಕಾರ್ಮಿಕರ ಏಳಿಗೆಯೂ ಸೇರಿದೆ. ಸಮಾಜದಲ್ಲಿ ಉಳ್ಳವರ ವರ್ಗಗಳ ಜೊತೆಗೆ ಈ ಕೂಲಿ ಕಾರ್ಮಿಕ ವರ್ಗವೂ ಸಮಾನತೆಯನ್ನು ಸಾಧಿಸಿದಾಗ ಮಾತ್ರ ಸಮಾಜದಲ್ಲಿ ಸಮತೋಲನ ಸಾಧ್ಯ" ಎಂದರು. ಕಾರ್ಯಕ್ರಮದಲ್ಲಿ ಶ್ರೀ ವಿಜಯ ಮಿರಾಶಿ, ಮುಖಂಡರಾದ ಪ್ರಮೋದ ಹೆಗಡೆ, ಗ್ರಾಮ ಪಂಚಾಯತಿಗಳ ಪ್ರತಿನಿಧಿಗಳು ಮತ್ತು ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಹಾಜರಿದ್ದರು. ಸಲಕರಣೆಗಳನ್ನು ವಿತರಿಸುವ ಕಾಯಕ್ರಮ ಹಮ್ಮಿಕೊಂಡಿತ್ತು.



# ಮನುವಿಕಾಸದಿಂದ ಕೋವಿಡ್-19ರ ತುರ್ತು ಸಮಯದಲ್ಲಿ ಜನಸಮುದಾಯಕ್ಕೆ ಅಗತ್ಯ ಕಿಟ್ ಹಾಗೂ ವೈದ್ಯಕೀಯ ಸಲಕರಣೆಗಳ ವಿತರಣೆ

ಇದರ ಕುರಿತಾದ ಛಾಯಾ ಚಿತ್ರಗಳ ಸಂಗ್ರಹ ತಮಗಾಗಿ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಕೋವಿಡ್ –19 ರ ತುರ್ತು ಸಂದರ್ಭದಲ್ಲಿ, ಈಡಲ್ ಗೀವ್ ಫೌಂಡೇಶನ್, ದಲ್ಯಾನ ಫೌಂಡೇಶನ್, ಅಜೀಂ ಪ್ರೇಮ್‌ಜಿ ಫೌಂಡೇಶನ್ ಮತ್ತು ವಟ್ಟಿಕುಟಿ ಇಂಡಿಯಾ ಫೌಂಡೇಶನ್ ಇವುಗಳ ಸಹಯೋಗದೊಂದಿಗೆ ಬಡವರು, ನಿರ್ಗತಿಕರು, ಅಂಗವಿಕಲರು,  ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ದಿನದ ಕೂಲಿ ಕಾರ್ಮಿಕರು, ಖಾಸಗಿ ಶಾಲಾ ಶಿಕ್ಷಕರು ಹೀಗೆ ಸಮಾಜದ ಹಲವು ಸಮದಾಯಗಳಿಗೆ ಅಗತ್ಯವಿರುವ ದಿನಸಿ ಕಿಟ್ ಗಳನ್ನು ವಿತರಿಸಿ ಅವರ ದಿನನಿತ್ಯದ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಹಾಯ ಹಸ್ತ ಚಾಚಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ ತಾಲೂಕುಗಳ ಸುಮಾರು 76 ಹಳ್ಳಿಗಳಿಗೆ ಸುಮಾರು 1500ಕ್ಕೂ ಹೆಚ್ಚು  ಕುಟುಂಬಗಳಿಗೆ ಅಗತ್ಯ ದಿನಸಿ ಕಿಟ್‌ಗಳನ್ನು ವಿತರಿಸಿದೆ.

ಅದೇ ರೀತಿ ವಟ್ಟಿಕುಟಿ ಇಂಡಿಯಾ ಫೌಂಡೇಶನ್ ಸಹ ಆರೋಗ್ಯ ಸಂಬಂಧಿ ವಿಷಯಗಳ ಮಹತ್ವವನ್ನು ಅರಿತು ಮನುವಿಕಾಸದೊಂದಿಗೆ ಕೈ ಜೋಡಿಸಿ,  ಕೊರೋನಾ ಸೋಂಕಿರು ಹಾಗೂ ಆಸ್ಪತೆಯ ವೈದ್ಯಾಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆಯರ ಸುರಕ್ಷತೆಯ ದೃಷ್ಟಿಯಿಂದ ಆಕ್ಸಿಜನ್ ಕಾನ್ಸಂಟ್ರೇಟರ್, ಮಾಸ್ಕ್, ಸ್ಯಾನಿಟೈಸರ್, ಫೇಸ್ ಶೀಲ್ಡ್, ಇನ್‌ಫ್ರಾರೆಡ್ ಥರ್ಮೋ ಮೀಟರ್, ಡಿಜಿಟಲ್ ಥರ್ಮೋ ಮೀಟರ್, ಪಲ್ಸ್ ಆಕ್ಸಿಮೀಟರ್ ಗಳನ್ನು ನೀಡಿದೆ. ಈಗಾಗಲೇ ಮನುವಿಕಾಸವು ಅದನ್ನು ಜಿಲ್ಲೆಯ ಕೆಲವು ತಾಲೂಕು ಆಸ್ಪತ್ರೆಗಳಿಗೆ ತಲುಪಿಸಿದೆ.


















# ಮನುವಿಕಾಸದಿಂದ ಸಮುದಾಯಗಳ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬನೆ ಸಾಧ್ಯ : ಜಿಲ್ಲಾಧಿಕಾರಿ ಸಂಜಯ್ ಶೆಟ್ಟಣ್ಣವರ್



ಮನುವಿಕಾಸ ಸಂಸ್ಥೆಯು ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಕಲಗುಡ್ಡೆ, ಕಿರವಾಡಿ ಮತ್ತು ಹಳ್ಳಿ ಬೈಲ್ ಗ್ರಾಮಗಳಲ್ಲಿ ಕೆರೆಗಳ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 8/4/2021 ರಂದು ಹಮ್ಮಿಕೊಂಡಿತ್ತು.

ಹಾವೇರಿ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ಸಂಜಯ್ ಶೆಟ್ಟಣ್ಣವರ್ ಕಲಗುಡ್ಡೆ ಕೆರೆಯ ವೀಕ್ಷಣೆ ಮತ್ತು ಹಳ್ಳಿ ಬೈಲ್ ಕೆರೆಯ ಉದ್ಘಾಟನೆ ಮಾಡಿ ಮಾತನಾಡಿ "ಗ್ರಾಮಗಳ ಕೆರೆಗಳ ರಕ್ಷಣೆ ಜನಸಮುದಾಯದ ಹೊಣೆಯಾಗಿದ್ದು ಸ್ಥಳೀಯವಾಗಿ ಲಭ್ಯವಿರುವ ನೀರಿನ ಮೂಲಗಳ ರಕ್ಷಣೆ ಆಗಬೇಕಿದೆ ಎಂದರು. ಸಮುದಾಯದ ಸಹಭಾಗಿತ್ವದ ಮೂಲಕ ಜಲ ಜಾಗೃತಿಯ ಮೂಲಕ ಜನರ ಆರ್ಥಿಕ ಸಬಲೀಕರಣವನ್ನು ಮಾಡಲು ಮುಂದಾಗಿರುವ ಮನವಿಕಾಸದಂತಹ ಸ್ವಯಂ ಸೇವಾ ಸಂಸ್ಥೆಗಳು ಅತಿ ವಿರಳ ಮತ್ತು ಸಂಸ್ಥೆಯ ಕಾರ್ಯವೈಖರಿ ಸಹ ಅಪರೂಪವಾದದ್ದು" ಎಂದು ಮನುವಿಕಾಸದ ಕೆಲಸಗಳನ್ನು ಶ್ಲಾಘಿಸಿದರು.

ಮನುವಿಕಾಸದ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ ಸಮುದಾಯಗಳ ಅಭಿವೃದ್ಧಿ ಆಗದ ಹೊರತು ದೇಶದ ಅಭಿವೃದ್ಧಿ ಅಸಾಧ್ಯ, ಮಹಿಳಾ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬನೆಗೆ ಪೂರಕ ಚಟುವಟಿಕೆಗಳನ್ನು ರೂಪಿಸುವ ಮೂಲಕ ಮನುವಿಕಾಸ ಸಮಾಜಮುಖಿ ಕೆಲಸಕ್ಕೆ ಮುಂದಾಗಿದೆ. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಮತ್ತು ಸರಕಾರದ ಇಲಾಖೆಗಳ ಸಹಕಾರ ಅಗತ್ಯವಾಗಿದೆ ಪರಸ್ಪರ ಸಹಕಾರದ ಮೂಲಕ ಮಾತ್ರ ಏಕತೆಯನ್ನು ಸಾಧಿಸಲು ಸಾಧ್ಯ" ಎಂದರು. ಇದೇ ಸಂದರ್ಭದಲ್ಲಿ ಮನುವಿಕಾಸದ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಅವರನ್ನು ಸನ್ಮಾನಿಸಲಾಯಿತು.

ಕೆರೆಯಿಂದ ಜಮೀನನ್ನು ಹಸನಾಗಿಸಿಕೊಂಡ ಕಲಗುಡ್ಡೆಯ ಗ್ರಾಮದ ರೈತರಾದ ವಿರೂಪಾಕ್ಷಪ್ಪ ಸೊಟ್ಟಣ್ಣನವರ್ ಸಂಸ್ಥೆಯ ಕೆಲಸಕ್ಕೆ ಪ್ರಶಂಸೆಯನ್ನು ವ್ಯಕ್ತಪಡಿಸುತ್ತಾ ಮುಂಬರುವ 5 ವರ್ಷಗಳು ವರ್ಷಕ್ಕೆ ತಲಾ 5000 ರೂಪಾಯಿಗಳ ಸಹಾಯವನ್ನು ಸಂಸ್ಥೆಗೆ ಮಾಡುವದಾಗಿ ಘೋಷಿಸಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರರಾದ ಎರ್ರಿಸ್ವಾಮಿ, ಎ.ಇ.ಎಸ್. ಸಿರಸಿ ಪಿ.ಎಸ್ ಪ್ರಾಧ್ಯಾಪಕರಾದ ಶ್ರೀ ಎಸ್.ಎಮ್ ಕಮನಳ್ಳಿ ತಾ.ಪಂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸುನೀಲ್, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ ಏಕನಾಥ ಬಾನವಳ್ಳಿ, ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರಾದ ಶ್ರೀಮತಿ ರಾಜೇಶ್ವರಿ ವೈ ಕಲ್ಲೇರ್, ಅಕ್ಕಿ ಆಲೂರು ಜಿ ಪಂ ಸದಸ್ಯರಾದ ಠಾಕನಗೌಡ ಪಾಟೀಲ್, ರಾಣಿಬೆನ್ನೂರು ಜಿ ಪಂ ಸದಸ್ಯರಾದ ಶ್ರೀ ಶಿವಾನಂದ ಕನ್ನಪ್ಪನವರ್, ತಾ. ಪಂ ಅಧ್ಯಕ್ಷರಾದ ಶ್ರೀ ಸಿದ್ದನಗೌಡ ಪಾಟೀಲ್, ಕಿರವಾಡಿ ಗ್ರಾಮ ಪಂಚಾಯತದ ಅಧ್ಯಕ್ಷರಾದ ಶ್ರೀ ನಿರಂಜನ್ ಪಾಟೀಲ್, ಗ್ರಾಮ ಪಂಚಾಯತ್ ಸದಸ್ಯರಾದ ಯಲ್ಲಪ್ಪ ಕಲ್ಲೇರ್, ಮುಖಂಡರಾದ ಶಿವಲಿಂಗಪ್ಪ ತಲ್ಲೂರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು, ತಾಲೂಕಾ ಪೋಲೀಸ್ ಇಲಾಖೆಯ ಅಧಿಕಾರಿಗಳು ಕಿರವಾಡಿ ಗ್ರಾಮ ಪಂಚಾಯತ್ ನ ಎಲ್ಲಾ ಸದಸ್ಯರು ಸೇರಿದಂತೆ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಹಾಜರಿದ್ದರು.



# ಕೆರೆಗಳ ಪುನಶ್ಚೇತನದಿಂದ ಸಮುದಾಯದ ಸ್ವಾವಲಂಬನೆ ತೋರಿದ ಮನುವಿಕಾಸ



ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ಹುಲ್ಲಂಬಿ ಮತ್ತು ತುಮರಿಕೊಪ್ಪ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವಂತಹ ಎರಡು ಕೆರೆಗಳ ಅಭಿವೃದ್ಧಿ ಕಾರ್ಯಕ್ರಮಗಳ ವೀಕ್ಷಣೆಗೆ ಮತ್ತು ಉದ್ಘಾಟನೆಗೆ ಕಲಘಟಗಿ ತಾಲೂಕಿನ ಶಾಸಕರಾದ ಶ್ರೀ. ಎಸ್.ಎಸ್. ನಿಂಬಣ್ಣನವರ್ ಆಗಮಿಸಿದ್ದರು.

ಕೆರೆಗಳನ್ನು ಉದ್ಘಾಟಿಸಿ ಮತ್ತು ವೀಕ್ಷಿಸಿ ಮಾತನಾಡಿದ ಅವರು "ಸತತ ಎರಡು ವರ್ಷದ ಬರದ ಪರಿಣಾಮ ನಮ್ಮ ಕಲಘಟಗಿ ಮತ್ತು ಧಾರವಾಡ ಭಾಗದಲ್ಲಿ ನೀರಿನ ಅಭಾವ ಹೆಚ್ಚಾಗಿ ಕಾಡುತ್ತಿದೆ. ಈ ಸಮಯದಲ್ಲಿ ಮನುವಿಕಾಸ ಸಂಸ್ಥೆಯವರು ಕೆರೆಗಳ ಪುನರುಜ್ಜೀವನ ಕೆಲಸವನ್ನು ಮಾಡುತ್ತಿರುವದು ತೀರಾ ಅಭಿನಂದನಾರ್ಹವಾಗಿದ್ದು, ನೀರಿನ ಸಮರ್ಪಕ ಹಂಚಿಕೆ ಮತ್ತು ಬಳಕೆಯಿಂದ ಮಾತ್ರ ನೈಸರ್ಗಿಕ ಸಂಪತ್ತನ್ನು ಮುಂದಿನ ಪೀಳಿಗೆಗೆ ಉಳಿಸಿಕೊಳ್ಳಲು ಸಾಧ್ಯ, ಕೇವಲ ಬೋರ್‌ವೆಲ್, ಕೊಳವೆ ಬಾವಿಗಳನ್ನು ಕೊರೆಸುವದರಿಂದ ಈ ಸಮಸ್ಯೆ ಬಗೆಹರಿಯುವದಿಲ್ಲ. ಕೆರೆಗಳ ಪುನಶ್ಚೇತನ ಕಾರ್ಯಕ್ರಮಗಳಿಂದ ನೀರಿನ ಆಕರಗಳನ್ನು ಉಳಿಸಿ ನಮ್ಮ ಭಾಗದಲ್ಲಿನ ಅಂತರ್ಜಲ ಮಟ್ಟವನ್ನು ಏರಿಸುವಲ್ಲಿ ಮನುವಿಕಾಸದ ಕೊಡುಗೆ ಅಪಾರವಾಗಿದೆ. ರೈತ ಸಮುದಾಯ ಇದರ ಪ್ರಯೋಜನ ಪಡೆದುಕೊಳ್ಳಬೇಕು" ಎಂದು ಮನುವಿಕಾಸದ ಕಾರ್ಯ ವೈಖರಿಯನ್ನು ಶ್ಲಾಘಿಸಿದರು.

ಇದೇ ಸಂದರ್ಭದಲ್ಲಿ ಮನುವಿಕಾಸದ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯ ಗ್ರಾಮಗಳ ಗ್ರಾಮಸ್ಥರು ಮತ್ತು ಗ್ರಾಮ ಪಂಚಾಯತಿಗಳ ಸದಸ್ಯರುಗಳು, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಹಾಜರಿದ್ದರು.





# ಮನುವಿಕಾಸದಿಂದ ನಿರ್ಮಿತ ಸಣ್ಣ ಕೃಷಿ ಹೊಂಡಗಳು, ರೈತರಲ್ಲಿ ನೀಗಿದ ನೀರಿನ ಆತಂಕಗಳು



ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಉಪಯೋಗ ಮತ್ತು ರೈತ ಸಮುದಾಯದ ಏಳಿಗೆಗಾಗಿ ಮನುವಿಕಾಸ ಸಂಸ್ಥೆಯು ಗೀವ್ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಉತ್ತರಕನ್ನಡ ಜಿಲ್ಲೆಯಲ್ಲಿ 2020–21 ರಲ್ಲಿ 80 ಕ್ಕೂ ಹೆಚ್ಚು ಸಣ್ಣ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿದೆ. ಇದರಲ್ಲಿ ರೈತರು ತಮ್ಮ ಹೊಲಗಳಿಗೆ ನೀರಿನ ಆಕರಗಳನ್ನು ಬಳಸಿಕೊಳ್ಳುವದರ ಜೊತೆಗೆ ಕುಡಿಯಲು ಯೋಗ್ಯವಾದ ನೀರನ್ನು ಪಡೆಯುತ್ತಿದ್ದಾರೆ.

ಈ ಸಣ್ಣ ಕೃಷಿ ಹೊಂಡಗಳು ತಲಾ 30 ಅಡಿ ಉದ್ದ ಮತ್ತು ಅಗಲವನ್ನು ಹೊಂದಿದ್ದು 10 ಅಡಿ ಆಳವನ್ನು ಹೊಂದಿವೆ. ಮನುವಿಕಾಸದ ಅಧ್ಯಯನದ ಪ್ರಕಾರ ಒಂದು ಕೃಷಿ ಹೊಂಡ ಮೂರು ಜನ ರೈತರಿಗೆ ಸಹಾಯವಾಗಬಲ್ಲದು.

ರೈತರಿಗೆ ತಾವು ಬೆಳೆಯುವ ಬೆಳೆಗಳಿಗೆ ನೀರನ್ನು ಒದಗಿಸುವದರ ಜೊತೆಗೆ ಬೇಸಿಗೆಯ ಸಮಯದಲ್ಲಿ ಕೂಡ ನೀರಿನ ಆಕರಕ್ಕಾಗಿ ಬೇರೆ ಮೂಲಗಳನ್ನು ಅವಲಂಬಿಸುವ ಅನಿವಾರ್ಯತೆಯನ್ನು ಈ ಸಣ್ಣ ಕೃಷಿ ಹೊಂಡಗಳು ನೀಗಿಸಿವೆ.










# ರೋಟರಿ ಕ್ಲಬ್ ಶಿರಸಿ ಇವರಿಂದ ಮನುವಿಕಾಸಕ್ಕೆ ಮೂರು ಆಕ್ಸಿಜನ್ ಕಾನ್ಸ್‌ಂಟ್ರೇಟರ್‌ಗಳ ಕೊಡುಗೆ

ಈಗಾಗಲೇ ಮನುವಿಕಾಸವು ಕೋವಿಡ್–19ರ ತುರ್ತು ಸಂದರ್ಭದಲ್ಲಿ ಹಲವು ಕಾರ್ಯಚಟುವಟಿಕೆಗಳ ಮೂಲಕ ತಳಮಟ್ಟದ ಜನಸಮುದಾಯವನ್ನು ತಲುಪಿದೆ.

ಮನುವಿಕಾಸ ಸಂಸ್ಥೆಯ ಜನಪರ ಕಾಳಜಿ ಕೆಲಸಗಳನ್ನು ಮನಗಂಡು ರೋಟರಿ ಕ್ಲಬ್ ಶಿರಸಿ ಇವರ ವತಿಯಿಂದ ಸಂಸ್ಥೆಗೆ ಮೂರು ಆಕ್ಸಿಜನ್ ಕಾನ್ಸ್‌ಂಟ್ರೇಟರ್‌ಗಳನ್ನು ಕೊಡುಗೆಯಾಗಿ ನೀಡಲಾಗಿದೆ.

ಕೊರೋನಾ ಸೋಂಕಿತ ಸಮುದಾಯಕ್ಕೆ ಅಗತ್ಯವಿರುವವರಿಗೆ ಈ ಆಕ್ಸಿಜನ್ ಕಾನ್ಸ್‌ಂಟ್ರೇಟರ್‌ಗಳು ಮನುವಿಕಾಸ ಸಂಸ್ಥೆಯಲ್ಲಿ ಲಭ್ಯವಿದ್ದು ಅಗತ್ಯತೆಯ ಆಧಾರದ ಮೇಲೆ ಇದನ್ನು ಬಾಡಿಗೆಗೆ ನೀಡಲಾಗುವುದು. ನಿಗದಿತ ಶುಲ್ಕ ಮತ್ತು ಕರಾರಿನ ಆಧಾರದ ಮೆಲೆ ಸೋಂಕಿತರು ಇದನ್ನು ಬಳಸಬಹುದಾಗಿದೆ.



ಕಾನ್ಸಂಟ್ರೇಟರ್ ಹಸ್ತಾಂತರ ಸಮಾರಂಭದಲ್ಲಿ ರೋಟರಿ ಕ್ಲಬ್ ಅಧ್ಯಕ್ಷರಾದ ಶ್ರೀ ರೊ. ಪಾಂಡುರಂಗ ಪೈ, ಮನುವಿಕಾಸ ಸಂಸ್ಥೆಯ ನಿರ್ದೇಶಕ ಶ್ರೀ ಗಣಪತಿ ಭಟ್ಟ, ರೊ॥ ಅನಂತ ಪದ್ಮನಾಭ, ರೊ॥ ಪ್ರವೀಣ ಕಾಮತ್ ರೊ॥ ಎನ್. ಜಿ. ದೇಶಪಾಂಡೆ ಇದ್ದರು

ಮನುವಿಕಾಸ ಸಂಸ್ಥೆ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಕೆಲಸ ನಿರ್ವಹಿಸುತ್ತಿದ್ದು, ಪ್ರತಿ ತಾಲೂಕಿಗೆ ಸಂಬಂಧಿತ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ.

| | | |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ-ಸಹಾಯ ಸಂಘಗಳ ನಿರ್ವಹಣೆ ) | 94494 53774 |
| | ಮಣಿಕಂಠ ಚಲವಾದಿ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 88615 10625 |
| | ಗಣಪತಿ ಗಾಮದ್ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 91132 59935 |
| | ಶೇಖರ ನಾಯ್ಕ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 77952 28417 |
| | ಶ್ರೀಕಾಂತ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ- ಸಹಾಯ ಸಂಘಗಳ ನಿರ್ವಹಣೆ ) | 94495 24860 |
| | ಅಶ್ವತ್ಥ್ ನಾಯ್ಕ (ಕೆರೆ ಅಭಿವೃದ್ಧಿ ಮತ್ತು ಸ್ವ- ಸಹಾಯ ಸಂಘಗಳ ನಿರ್ವಹಣೆ) | 99011 82957 |
| ಸಿದ್ದಾಪುರ | ಪುನೀತ್ ನಾಯ್ಕ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 96862 24908 |
| | ಸೂರ್ಯನಾರಾಯಣ ಹೆಗಡೆ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 88614 31391 |
| ಹಳಿಯಾಳ | ಮಂಜುನಾಥ ತೊರಲೆಕರ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 95389 56554 |
| ಯಲ್ಲಾಪುರ | ರಾಘವೇಂದ್ರ ಭಟ್ಟ ( ಕೆರೆ ಅಭಿವೃದ್ಧಿ ಮತ್ತು ಸ್ವ- ಸಹಾಯ ಸಂಘಗಳ ನಿರ್ವಹಣೆ | 94484 24374 |
| ಮುಂಡಗೋಡ | ಬಸವರಾಜ ರಡ್ಡೇರ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 80953 11643 |
| | ಗಣಪತಿ ಯಲಿವಾಳ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 99802 05013 |
| ಅಂಕೋಲಾ | ಮಹೇಶ ನಾಯ್ಕ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 82770 02750 |
| ಕಾರವಾರ | ಗೋಪಾಲ ಬಾಡಕರ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 94810 83453 |
| ದಾಂಡೇಲಿ | ನಿರಂಜನ್ ಕದಂ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 72596 89630 |



**ಮನುವಿಕಾಸ ಸಂಸ್ಥೆಗೆ ಆರ್ಥಿಕ ಸಹಕಾರ ನೀಡುತ್ತಿರುವ ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳು**

Deshpande Foundation
EdelGive Foundation — An Edelweiss Initiative
Anandana — Coca-Cola India Foundation
SGP — The GEF Small Grants Programme — UNDP — gef
GiveIndia — the power to change lives
HDB Financial Services
NABARD
YES Foundation
Hanns Seidel Stiftung — India Office
Azim Premji Philanthropic Initiatives
Vattikuti India Foundation
CMS Info Systems Pvt. Ltd.
dalyan

**ನಿಮ್ಮ ದೂರು ಮತ್ತು ಸಲಹೆಗಳಿಗೆ ಮನುವಿಕಾಸ ದ ಪ್ರಧಾನ ಕಛೇರಿಯನ್ನು ಸಂಪರ್ಕಿಸಿರಿ**


ಮನುವಿಕಾಸ ಸಂಸ್ಥೆಯ ಸಂಪರ್ಕವಿಳಾಸ

# MANUVIKASA

**'MANGESH MAHALAXMI' BUILDING**

Rayarpeth, Behind Anjaneya Temple, Vijayanagar,Sirsi Cell: **9845982552**
**www.manuvikasa.blogspot.com**
**http://facebook.com/manuvikasa.karjagi www.manuvikasaindia.org**
**Email : manuvikasa@gmail.com**


Multi Offset, SIRSI 9449453234